ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SP NEWS ಡಿಜಿಟಲ್ ನ್ಯೂಸ್ ಕಹಾನಿ

SURYA PRAGATHI Kannada daily

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue: 231 ಸಂಚಿಕೆ: 231 | Date: 07-10-2026 Wednesday | RNI NO : KARKAN/2021/80805 | L2/RNP-1285/TMR/2025-27 | Page: 4 ಪುಟ : 4 | Price: 1.00 ಬೆಲೆ: 1.00 ರೂ

ಸಣ್ ಸುದ್ದಿ



ನವದೆಹಲಿಯಲ್ಲಿಂದು ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಗಜೇಂದ್ರ ಸಿಂಗ್ ಶೇಕಾವತ್ ಅವರನ್ನು ತುಮಕೂರು ಲೋಕಸಭಾ ಸದಸ್ಯ ಹಾಗೂ ಕೇಂದ್ರ ಸಚಿವ ವಿ ಸೋಮಣ್ಣ ಭೇಟಿ ಮಾಡಿ, ತುಮಕೂರು ಜಿಲ್ಲೆಯ ಮಧುಗಿರಿ ಏಕಶಿಲಾ ಬೆಟ್ಟ, ದೇವರ ತಂಡ ದುರ್ಗಬೆಟ್ಟ ಮತ್ತು ಸಿದ್ದರಬೆಟ್ಟಗಳ ಅಭಿವೃದ್ಧಿ ಮತ್ತು ಸಮಗ್ರ ತುಮಕೂರಿನ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಯ ಕುರಿತು ಚರ್ಚಿಸಿದರು..

ಮಾಜಿ ಸಚಿವರು ಹಾಗೂ ಶಾಸಕರಾದ ಕೆ. ಎನ್. ರಾಜಣ್ಣ ಅವರ ಮನವಿಯಂತೆ ನವದೆಹಲಿಯಲ್ಲಿ ಕೇಂದ್ರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾದ ಗಜೇಂದ್ರ ಸಿಂಗ್ ಶೇಕಾವತ್ ಅವರನ್ನು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಸಚಿವರಾದ ವಿ. ಸೋಮಣ್ಣ ಅವರು ಭೇಟಿ ಮಾಡಿ, ತುಮಕೂರು ಜಿಲ್ಲೆಯ ಮಧುಗಿರಿ ಏಕಶಿಲಾ ಬೆಟ್ಟ, ಮತ್ತು ಸಿದ್ದರಬೆಟ್ಟಗಳ ಅಭಿವೃದ್ಧಿ ಮತ್ತು ಸಮಗ್ರ ತುಮಕೂರಿನ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಯ ಕುರಿತು ಚರ್ಚಿಸಿದ್ದು ಮಧುಗಿರಿ ಪ್ರವಾಸಿ ಕೇಂದ್ರವಾದರೆ ಸ್ಥಳೀಯವಾಗಿ ಉದ್ಯೋಗಗಳು ದೊರೆತು ಆರ್ಥಿಕ ಚಟುವಟಿಕೆಗಳು ಗರಿಗೆದರಲಿವೆ ಎಂದು ಸಾರ್ವಜನಿಕರ ಅಭಿಪ್ರಾಯವಾಗಿದೆ..



ಜಿಲ್ಲಾಡಳಿತದಿಂದ ಅಕ್ಟೋಬರ್ 11ರಿಂದ 21ರವರೆಗೆ ಆಯೋಜಿಸಲಾಗುವ ದಸರಾ ಆಚರಣೆ ಕಾರ್ಯಕ್ರಮದ ನಿಮಿತ್ತ ಪ್ರಚಾರ ಸಮಿತಿಯಿಂದ ಸೋಮವಾರ ಸಂಜೆ ಕೆಎಸ್ಆರ್‌ಟಿಸಿ ಬಸ್‌ಗಳ ಮೇಲೆ ದಸರಾಗೆ ಸಂಬಂಧಿಸಿದ ಪೋಸ್ಟರ್‌ಗಳನ್ನು ಅಳವಡಿಸಲಾಯಿತು. ಈ ಸಂದರ್ಭದಲ್ಲಿ ದಸರಾ ಪ್ರಚಾರ ಸಮಿತಿಯ ಅಧ್ಯಕ್ಷ ಹಾಗೂ ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಬಸವರಾಜು, ಭೂದಾಖಲೆಗಳ ಇಲಾಖೆ ಉಪನಿರ್ದೇಶಕಿ ಭಾವನ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ, ಕೆಎಸ್ಆರ್‌ಟಿಸಿಯ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿ ಹಾಜರಿದ್ದರು.


ನೀರಿನ ಸಮಸ್ಯೆ ಉಲ್ಬಣಕ್ಕೆ ಜಿಲ್ಲಾಡಳಿತವೇ ಕಾರಣ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು : ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ, ಮಳೆಯಾಗದಿದ್ದರೆ ಗಂಭೀರ ಸಮಸ್ಯೆ ಎದುರಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಉಪ ಮುಖ್ಯ ಮಂತ್ರಿ ಡಾ.ಜಿ. ಪರಮೇಶ್ವರ್ ಅವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯ ಇಂದಿನ ದುಃಸ್ಥಿತಿಗೆ ಜಿಲ್ಲಾ ಸಚಿವರು ಹಾಗೂ ಜಿಲ್ಲಾಡಳಿತವೇ ಹೊಣೆಎಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಟಿ.ಆರ್. ಸದಾಶಿವಯ್ಯ ಟೀಕಿಸಿದ್ದಾರೆ. ಈ ಬಾರಿ ಬರ ಪರಿಸ್ಥಿತಿ ಎದುರಾಗುತ್ತದೆ ಎಂಬ ವರದಿ ಇದ್ದರೂಜಿಲ್ಲಾ ಸಚಿವರಾಗಲಿ, ಜಿಲ್ಲಾಡಳಿತ ವಾಗಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ ಮಾಡಿದರು. ಜಿಲ್ಲೆಗೆ ಲಭ್ಯವಿದ್ದ ಪೂರ್ಣ ಪ್ರಮಾಣದ ಹೇಮಾವತಿ ನೀರನ್ನುಜಿಲ್ಲೆಯ ಕೆರೆಗಳಿಗೆ ತುಂಬಿಸಿದ್ದರೆ, ಇಂತಹ ದು:ಸ್ಥಿತಿ ಬರುತ್ತಿರಲ್ಲಿ. ಆಗ ಹೇಮಾವತಿ ನೀರನ್ನು ಕಾವೇರಿ ಮೂಲಕ ತಮಿಳುನಾಡಿಗೆ ಹರಿಯಲು ಬಿಟ್ಟು ನಮಗೆ ನೀರಿಲ್ಲದಂತೆ ಮಾಡಿದ ಜಿಲ್ಲಾಡಳಿತವೇ ಇಂದಿನ ಪರಿಸ್ಥಿತಿಯ ಹೊಣೆ ಹೊರಬೇಕು ಎಂದು ಹೇಳಿದ್ದಾರೆ.

ಜಿಲ್ಲೆಯಲ್ಲಿ ಬಿತ್ತನೆ ಆಗಿಲ್ಲ, ಬಿತ್ತನೆ ಮಾಡಿದ್ದ ಅಲ್ಪ ಸ್ವಲ್ಪವೂ ಮಳೆ ಇಲ್ಲದೆ ಒಣಗಿ ರೈತರು ತೀವ್ರ ನಷ್ಟ ಅನುಭವಿಸಿದ್ದಾರೆ.ಅನೇಕ ಕಡೆ ಕುಡಿಯುವ ನೀರಿಗೂ ಸಮಸ್ಯೆ ಇದೆ. ಅಂತರ್ಜಲ ಕುಸಿದು ಕೊಳವೆ ಬಾವಿಗಳು ಬತ್ತಿ ಹೋಗಿವೆ. ರೈತರು ತೋಟದ ಬೆಳೆ ಉಳಿಸಿಕೊಡಲು ಕಷ್ಟ ಪಡುತ್ತಿದ್ದಾರೆ. ಸಾಲದಕ್ಕೆ ಸಮರ್ಪಕವಾದ ವಿದ್ಯುತ್ ಸರಬರಾಜು ಇಲ್ಲದೆ ರೈತರು ಕಂಗಾಲಾಗಿದ್ದಾರೆ. ರೈತರ ನೆರವಿಗೆ ಬರಬೇಕಾಗಿದ್ದ ಸರ್ಕಾರ ನಿರ್ಲಕ್ಷ ಮಾಡಿದೆ. ಬರ ಪರಿಹಾರ ಕಾರ್ಯಕ್ರಮಗಳು ಸಮರ್ಪಕವಾಗಿ ಆರಂಭವಾಗಿಲ್ಲ ಎಂದು ಟಿ.ಆರ್.ಸದಾಶಿವಯ್ಯ ಆರೋಪಿಸಿದ್ದಾರೆ.



ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಜಿಲ್ಲಾಡಳಿತಕ್ಕೆ ಜನರ ಕಷ್ಟಕ್ಕಿಂಥಾ ತುಮಕೂರಿನಲ್ಲಿ ದಸರಾ ಉತ್ಸವ ಮಾಡುವ ಸಡಗರವೇ ಹೆಚ್ಚಾಗಿದೆ.ಯಾವ ಕಚೇರಿಯಲ್ಲೂ ಅಧಿಕಾರಿಗಳು ಜನರಿಗೆ ಸಿಗುತ್ತಿಲ್ಲ, ಅವರು ದಸರಾ ಉತ್ಸವ ಮೀಟಿಂಗ್‌ಗೆ ಹೋಗಿದ್ದಾರೆ ಎಂಬ ಉತ್ತರ ಬರುತ್ತದೆ. ಜಿಲ್ಲಾಡಳಿತಕ್ಕೆ ಮಾನವೀಯತೆ ಇದ್ದರೆ ದಸರಾ ಕಾರ್ಯವನ್ನು ಬದಿಗಿರಿಸಿ ಬರ ಪರಿಹಾರ ಕೆಲಸಗಳಿಗೆ ಆದ್ಯತೆ ನೀಡಲಿ ಎಂದು ಆಗ್ರಹಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಿಲ್ಲಾಡಳಿತದ ದಸರಾ ಉತ್ಸವದಲ್ಲಿ ಕೋಟ್ಯಾಂತರ ರೂ. ಅಕ್ರಮ

ಜಿಲ್ಲಾಡಳಿತದ ವಿರುದ್ಧ 'ದಸರಾ ಲೆಕ್ಕ ಕೊಡಿ' ಅಭಿಯಾನ: ಜಿ.ಎಸ್. ಬಸವರಾಜು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಜಿಲ್ಲಾಡಳಿತದ ವತಿಯಿಂದ 2025ರಲ್ಲಿ ನಗರದಲ್ಲಿ ಆಯೋಜಿಸಿದ್ದ 'ತುಮಕೂರು ದಸರಾ' ಕಾರ್ಯಕ್ರಮದಲ್ಲಿ ಯಾವುದೇ ನಿಯಮಗಳನ್ನು ಪಾಲಿಸದೆ, ಕೋಟ್ಯಾಂತರ ರೂ. ಅವ್ಯವಹಾರ ನಡೆದಿದ್ದು, 'ದಸರಾ ಉತ್ಸವದ ಖರ್ಚು, ವೆಚ್ಚಗಳ ಲೆಕ್ಕ ಕೊಡಿ' ಎಂಬ ಅಭಿಯಾನ ಆರಂಭಿಸಲಾಗುವುದು. ಲೆಕ್ಕ ಕೊಡದೆ ಈ ವರ್ಷದ ದಸರಾ ಉತ್ಸವ ಮಾಡಕೂಡದು ಎಂದು ರಾಷ್ಟ್ರೀಯ ಮಾನವ ಪರಿಸರ ಸಂರಕ್ಷಣಾ ಪಡೆ ಅಧ್ಯಕ್ಷ ಜಿ.ಎಸ್. ಬಸವರಾಜು ಜಿಲ್ಲಾಡಳಿತವನ್ನು ಒತ್ತಾಯಿಸಿದರು.



ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉತ್ಸವ ಸಂಬಂಧ ನಗರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲವಾಗಿ ಅಧಿಕಾರಿಗಳ ಪ್ರಭುತ್ವ ಕಂಡುಬಂದಿದೆ. ಅಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸಿದ್ದಾರೆ. ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದು, ಅವ್ಯವಹಾರ ಮಾಡುವ ಉದ್ದೇಶದಿಂದಲೇ ದಸರಾ ಉತ್ಸವ ಮಾಡಲಾಗುತ್ತಿದೆ ಎಂಬ ಅನುಮಾನ ಬಂದಿದೆ ಎಂದು ಹೇಳಿದರು. ಜಿಲ್ಲಾಧಿಕಾರಿ ಕಚೇರಿಯಿಂದ ಪಡೆದ ಅಧಿಕೃತ ದಾಖಲೆಗಳ ಪ್ರಕಾರ 2.58 ಕೋಟಿ ರೂ. ಜಿಲ್ಲಾಧಿಕಾರಿ ಖಾತೆಗೆ ಬಂದಿದ್ದು, 56 ಚೆಕ್ ಮೂಲಕ 2.36 ಕೋಟಿ ರೂ. ಖರ್ಚು ಮಾಡಿದ್ದು 22 ಲಕ್ಷ ಉಳಿಸಲಾಗಿದೆ. ಖರ್ಚಿಗೆ ಸಂಬಂಧಪಟ್ಟ ಯಾವುದೇ ರಸೀದಿ, ವೋಚರ್, ಬಿಲ್, ಕೋಟೇಷನ್ ದಾಖಲೆಗಳಿಲ್ಲ. ತಹಸೀಲ್ದಾರರಿಗೆ 5 ಚೆಕ್ ಮೂಲಕ 46.50 ಲಕ್ಷ ನೀಡಿದ್ದು ಈ ಖರ್ಚಿನ ಬಗ್ಗೆಯೂ ದಾಖಲೆಗಳಿಲ್ಲ, ತೋಟಗಾರಿಕೆ ಇಲಾಖೆ ಪಡೆದ 35 ಲಕ್ಷ ರೂ. ದಾಖಲೆಗಳಿಲ್ಲ. ಸರ್ಕಾರದಿಂದ 1.50 ಕೋಟಿ ರೂ. ಬಿಡುಗಡೆಯಾಗಿದ್ದು ಈ ಹಣದ ಬಗ್ಗೆಯೂ ದಾಖಲೆಗಳಿಲ್ಲ, ಮಹಾನಗರ ಪಾಲಿಕೆ ದಸರಾ ಮುಗಿದು ಒಂದು ತಿಂಗಳ ನಂತರ ಡಿಸಿ ಖಾತೆಗೆ 50 ಲಕ್ಷ ರೂ. ನಗದು ಜಮಾ ಮಾಡಲಾಗಿದೆ. ಒಟ್ಟು 2 ಕೋಟಿ ರೂ.ಗಳ ಖರ್ಚು, ವೆಚ್ಚದ ಬಗ್ಗೆ ಯಾವುದೇ ದಾಖಲೆಗಳಿಲ್ಲ ಎಂದು ಜಿ.ಎಸ್. ಬಸವರಾಜು ಹೇಳಿದರು.

ಮಹಾನಗರ ಪಾಲಿಕೆಯಿಂದ ಸಾರ್ವಜನಿಕರ ತೆರಿಗೆ ಹಣ 1.05 ಕೋಟಿ ರೂ. ದಸರಾ ಉತ್ಸವಕ್ಕಾಗಿ ಖರ್ಚು ಮಾಡಲಾಗಿದೆ, ಸರ್ಕಾರ ನೀಡಿರುವ ಹಣವನ್ನು ಟೆಂಡರ್ ಸೇರಿದಂತೆ ಮಾರ್ಗದರ್ಶಿ ಪಾಲಿಸುವಂತೆ ಸೂಚಿಸಿದ್ದರೂ ಜಿಲ್ಲಾಧಿಕಾರಿ ತಮಗೆ ಇಷ್ಟ ಬಂದಂತೆ ಹಣ ಪೋಲು ಮಾಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಸುಮಾರು ನಾಲ್ಕುವರೆ ಕೋಟಿ ರೂ. ಹಣ ಖರ್ಚು ಮಾಡಿದ್ದರೂ ಅಧಿಕೃತ ದಾಖಲೆಗಳಿಲ್ಲ, ಹಾಗಾಗಿ, ಇದರಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವ ಅನುಮಾನವಿದೆ. ಹಣ ಹೊಡೆಯಲಷ್ಟೇ ದಸರಾ ಉತ್ಸವ ಮಾಡಲಾಗುತ್ತಿದೆ ಎಂದು ತುಮಕೂರು ದಸರಾ ಆಯೋಜಿಸುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನ ವ್ಯಕ್ತವಾಗಿದೆ ಎಂದರು.

ಲೆಕ್ಕ ಪರಿಶೋಧಕರ ದೃಢೀಕರಿಸಿದ ವರದಿ ಕಳೆದ ಎರಡು ವರ್ಷದಿಂದಲೂ ಸಲ್ಲಿಕೆಯಾಗಿಲ್ಲ, ಸಾರ್ವಜನಿಕರಿಂದ ಸಂಗ್ರಹಿಸಿರುವ ಹಣ, ಸರ್ಕಾರದಿಂದ ನೀಡಿರುವ ಹಣದಲ್ಲಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. 2025ನೇ ಸಾಲಿನ ಹಣದ ಬಗ್ಗೆ ಸಾರ್ವಜನಿಕರಿಗೆ ಲೆಕ್ಕ ಕೊಟ್ಟು 2026ರಲ್ಲಿ ದಸರಾ ಮಾಡಲಿ, ಇದಾಗದಿದ್ದರೆ ಜಿಲ್ಲಾಡಳಿತದ ವಿರುದ್ಧ 'ಲೆಕ್ಕ ಕೊಡಿ' ಅಭಿಯಾನ ಆರಂಭಿಸಲಾಗುವುದು ಎಂದು ಜಿ.ಎಸ್. ಬಸವರಾಜು ಹೇಳಿದರು.

ರಾಷ್ಟ್ರೀಯ ಮಾನವ ಪರಿಸರ ಸಂರಕ್ಷಣಾ ಪಡೆ ಉಪಾಧ್ಯಕ್ಷ ಜಿ.ಕೆ. ಶ್ರೀನಿವಾಸ್ ಮಾತನಾಡಿ, ತುಮಕೂರು ಮಹಾನಗರ ಪಾಲಿಕೆ ನಿಧಿಯನ್ನು ಖರ್ಚು ಮಾಡಲು ಚುನಾಯಿತ ಪ್ರತಿನಿಧಿಗಳ ಸಭೆಯಲ್ಲಿ ಒಪ್ಪಿಗೆ 2ನೇ ಪುಟಕ್ಕೆ

ಬರ ಹಿನ್ನೆಲೆಯಲ್ಲಿ ಜನರ ಸಂಕಷ್ಟಕ್ಕೆ ಸರ್ಕಾರದ ಸ್ಪಂದನೆ ಮೋಜಿಣಿ ಶುಲ್ಕ ಹೆಚ್ಚಳಕ್ಕೆ ತಡೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು, : ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ನಿರ್ಮಾಣ ವಾಗಿರುವ ಹಿನ್ನೆಲೆಯಲ್ಲಿ ರೈತರ ಹಿತಾಸಕ್ತಿಯನ್ನು ಪರಿಗಣಿಸಿ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಮೋಜಿಣಿ ವ್ಯವಸ್ಥೆಯಡಿ ಸಾರ್ವಜನಿ ಕರಿಂದ ಸ್ವೀಕರಿಸಲಾಗುವ ವಿವಿಧ ಅಳತೆ ಅರ್ಜಿಗಳ ಪರಿಷ್ಕೃತ ಶುಲ್ಕವನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವಂತೆ ಎಂದು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸರ್ಕಾರದ ಆದೇಶ ಸಂಖ್ಯೆ:ಕಂಇ 170 ಎಸ್‌ಎಸ್‌ಸಿ 2026, ಬೆಂಗಳೂರು, ದಿನಾಂಕ 19-09-2026ರ ಅನ್ವಯ, ಮೋಜಿಣಿ ವ್ಯವಸ್ಥೆಯಡಿ ಸ್ವೀಕರಿಸಲಾಗುವ ವಿವಿಧ ರೀತಿಯ ಅಳತೆ ಅರ್ಜಿಗಳ ಶುಲ್ಕ ಹಾಗೂ ಪರವಾನಗಿ ಪಡೆದ ಭೂಮಾಪಕರ ಸೇವಾ ಶುಲ್ಕವನ್ನು ಪರಿಷ್ಕರಿಸಿ, 01-10-2026ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿತ್ತು. ಆದರೆ, ಪ್ರಸ್ತುತ ರಾಜ್ಯದ ವಿವಿಧ ಭಾಗಗಳಲ್ಲಿ ತೀವ್ರ ಬರ ಪರಿಸ್ಥಿತಿ ಇರುವುದರಿಂದ ರೈತರು ಈಗಾಗಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಭೂಮಾಪನ ಮತ್ತು ಕಂದಾಯ ಸೇವೆಗಳ ಶುಲ್ಕ ಹೆಚ್ಚಳದಿಂದ ರೈತರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳಬಾರದು ಎಂಬ ಉದ್ದೇಶದಿಂದ ಪರಿಷ್ಕೃತ ಶುಲ್ಕವನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಮುಂದಿನ ಆದೇಶ ಹೊರಡಿಸುವವರೆಗೆ ಮೋಜಿಣಿ ಸೇವೆಗಳಿಗೆ ಸಂಬಂಧಿಸಿದಂತೆ 01-10-2026ಕ್ಕೂ ಮೊದಲು ಚಾಲ್ತಿಯಲ್ಲಿದ್ದ ಶುಲ್ಕವೇ ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.



ಬರದಂತಹ ಸಂಕಷ್ಟದ ಸಂದರ್ಭದಲ್ಲಿ ರೈತರ ಹಿತಾಸಕ್ತಿಯೇ ಸರ್ಕಾರದ ಮೊದಲ ಆದ್ಯತೆ. ಈಗಾಗಲೇ ಹಲವು ರೀತಿಯ ಆರ್ಥಿಕ ಒತ್ತಡ ಎದುರಿಸುತ್ತಿರುವ ರೈತರ ಮೇಲೆ ಕಂದಾಯ ಇಲಾಖೆಯ ಸೇವೆಗಳ ಮೂಲಕ ಹೆಚ್ಚುವರಿ ಹೊರೆ ಬೀಳಬಾರದು. ಅದಕ್ಕಾಗಿ ಪರಿಷ್ಕೃತ ಶುಲ್ಕವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ ಎಂದು ಡಿಸಿಎಂ ಪರಮೇಶ್ವರ ತಿಳಿಸಿದ್ದಾರೆ.

ರಾಜ್ಯದ ಬರ ಪರಿಸ್ಥಿತಿ ಹಾಗೂ ರೈತರ ಆರ್ಥಿಕ ಸ್ಥಿತಿಯನ್ನು ಮುಂದಿನ ದಿನಗಳಲ್ಲಿ ನಿರಂತರವಾಗಿ ಅವಲೋಕಿಸಲಾಗುವುದು. ಪರಿಸ್ಥಿತಿ ಸುಧಾರಿಸಿದ ಬಳಿಕ ಸೂಕ್ತ ಸಮಯದಲ್ಲಿ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಮರು ಆದೇಶ ಹೊರಡಿಸಲಾಗುವುದು. ರೈತರ ಹಿತಾಸಕ್ತಿ ಮತ್ತು ಸಾರ್ವಜನಿಕ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಂಡೇ ಕಂದಾಯ ಇಲಾಖೆಯ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

ರಾಜ್ಯ ಮಿನಿ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ತುಮಕೂರಿನ ಮಕ್ಕಳಿಗೆ ತರಬೇತಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು : ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಮಿನಿ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ಅನುವಾಗುವಂತೆ ತುಮಕೂರಿನ ಮಕ್ಕಳಿಗೆ ಕಯಾಕಿಂಗ್, ಕನೋಯಿಂಗ್ ಹಾಗೂ ಶೂಟಿಂಗ್ ತರಬೇತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ ತಿಳಿಸಿದರು.



ಜಿಲ್ಲಾ ಧಿಕಾರಿಗಳ ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಬೆಳೆಸುವ ಹಾಗೂ ಜಿಲ್ಲೆಯ ಕ್ರೀಡಾ ಪ್ರತಿಭೆಗಳಿಗೆ ಉತ್ತಮ ಅವಕಾಶ ಕಲ್ಪಿಸುವ ಉದ್ದೇಶದಿಂದ ಕಯಾಕಿಂಗ್ ಮತ್ತು ಕನೋಯಿಂಗ್, ಶೂಟಿಂಗ್ ಸೇರಿದಂತೆ ವಿವಿಧ ಕ್ರೀಡಾ ಚಟುವಟಿಕೆಗಳಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಕಳೆದ ಮಾರ್ಚ್ 15 ರಿಂದ ನಗರದ ಅಮಾನಿಕೆರೆಯಲ್ಲಿ ಕಯಾಕಿಂಗ್ ಮತ್ತು ಕನೋಯಿಂಗ್ ತರಬೇತಿಯನ್ನು ಪ್ರಾರಂಭಿಸಲಾಗಿದ್ದು, ಈಗಾಗಲೇ ವಿವಿಧ ರಾಜ್ಯ/ಜಿಲ್ಲೆಯ ವಿದ್ಯಾರ್ಥಿಗಳು ಅಮಾನಿ ಕೆರೆಯಲ್ಲಿ ತರಬೇತಿ ಪಡೆದು ರಾಷ್ಟ್ರ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ವೈಜಾಗ್‌ನಲ್ಲಿ ನಡೆದ ಸೌತ್ ಅಸ್ಮಿತಾ ಕ್ರೀಡೆ ಹಾಗೂ ಭೂಪಾಲ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಯಲ್ಲಿ ಭಾಗವಹಿಸಿದ್ದ ಈ ವಿದ್ಯಾರ್ಥಿಗಳು 4 ಚಿನ್ನ, 3 ಬೆಳ್ಳಿ ಹಾಗೂ 5 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.

ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ತರಬೇತಿಗಳಲ್ಲಿ ಭಾಗವಹಿಸಲು ಅನುವಾಗುವಂತೆ ಕಡಿಮೆ ಶುಲ್ಕದಲ್ಲಿ ಸ್ಥಳೀಯ ಮಕ್ಕಳಿಗೆ ಕಯಾಕಿಂಗ್, ಕನೋಯಿಂಗ್, ಶೂಟಿಂಗ್ ತರಬೇತಿ ನೀಡಲು ಅಗತ್ಯ ಮೂಲ ಸೌಕರ್ಯ ಹಾಗೂ ಉತ್ತಮ ತರಬೇತಿ ದಾರರನ್ನು ಒದಗಿಸಲು ಜಿಲ್ಲಾಡಳಿತದಿಂದ ಸಿದ್ಧತೆ ನಡೆದಿದೆ. ಈ ತರಬೇತಿಯಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಕ್ರೀಡಾ ಸ್ಪರ್ಧೆಗಳಲ್ಲಿ ಹೆಚ್ಚಿನ ಅವಕಾಶ ದೊರೆಯಲಿದೆ ಎಂದರಲ್ಲದೆ ಜಿಲ್ಲೆ ಹಾಗೂ ರಾಜ್ಯಕ್ಕೆ ಕೀರ್ತಿ ತರುವಂತಹ ಕ್ರೀಡಾ ಪಟುಗಳನ್ನು ರೂಪಿಸುವ ಗುರಿ ಹೊಂದಲಾಗಿದೆ ಎಂದರು.



ಮೊಬೈಲ್ ಬಳಕೆಯಿಂದ ಮಕ್ಕಳು ಕ್ರೀಡೆಯಿಂದ ದೂರವಾಗುತ್ತಿರುವ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಕರು ಹಾಗೂ ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಬೇಕು. ಕ್ರೀಡೆಯಿಂದ ಏಕಾಗ್ರತೆ, ಮಾನಸಿಕ ಸದೃಢತೆ ಹಾಗೂ ದೈಹಿಕ ಕ್ಷಮತೆ ಹೆಚ್ಚುತ್ತದೆ ಎಂದು ಮಕ್ಕಳಿಗೆ ಮನವರಿಕೆ ಮಾಡಬೇಕೆಂದು ಹೇಳಿದರು. ತರಬೇತಿ ನೀಡಲು ಉತ್ತಮ ತರಬೇತುದಾರರು ಜಿಲ್ಲೆಯಲ್ಲಿ ಲಭ್ಯವಿದ್ದು, ಮಕ್ಕಳನ್ನು ಕ್ರೀಡಾ ಸ್ಪರ್ಧೆಗಳಿಗೆ ಅಣಿ ಮಾಡಲು ಮೊದಲಿಗೆ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲು ಇನ್ನೆರಡು ದಿನಗಳಲ್ಲಿ ದಿನಾಂಕ ನಿಗದಿ ಗೊಳಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಘು ಚಂದ್ರ ಅವರಿಗೆ ಸೂಚನೆ ನೀಡಿದರು.

ತುಮಕೂರಿನಿಂದ ಉತ್ತಮ ತಂಡವನ್ನು ರೂಪಿಸುವ ಗುರಿ ಹೊಂದಲಾಗಿದೆ. ಶಾಲಾ-ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಈ ಕುರಿತು ಮಾಹಿತಿ ನೀಡಿ ಹೆಚ್ಚಿನ ವಿದ್ಯಾರ್ಥಿಗಳು ತರಬೇತಿಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಭಾರತೀಯ ಶೂಟರ್ ಒಲಂಪಿಯನ್ ಪ್ರಕಾಶ್ ನಂಜಪ್ಪ ಮಾತನಾಡಿ, ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಅವಕಾಶ ತುಮಕೂರು ಜಿಲ್ಲೆಗೆ ದೊರೆತಿರುವುದು ಅದೃಷ್ಟದ ಸಂಗತಿ. ಶೂಟಿಂಗ್ ತರಬೇತಿ ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ಶೂಟಿಂಗ್ ತರಬೇತಿಗೆ 10 ವರ್ಷ ಮೇಲ್ಪಟ್ಟ ಮಕ್ಕಳು ಭಾಗವಹಿಸಬಹುದು. ತರಬೇತಿ ನಂತರ ಅಂತರ್ ಶಾಲಾ/ಕಾಲೇಜು ಮಟ್ಟದಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಕರ್ನಾಟಕ ಕಯಾಕಿಂಗ್-ಕನೋಯಿಂಗ್ ಅಕಾಡೆಮಿ ಕಾರ್ಯದರ್ಶಿ ಕ್ಯಾಪ್ಟನ್ ದಿಲೀಪ್ ಮಾತನಾಡಿ, ಜಿಲ್ಲೆಯ ಕ್ರೀಡಾ ಪಟುಗಳು ಜಲ ಕ್ರೀಡೆಗಳಲ್ಲಿ ಭಾಗವಹಿಸಲು ಹೆಚ್ಚಿನ ಆಸಕ್ತಿ ತೋರಬೇಕು. ತರಬೇತಿ ಪಡೆಯಲು ದಸರಾ ರಜೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು. ಸಭೆಯಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ (ಟುಡಾ) ಆಯುಕ್ತ ಉಮೇಶ್ ಚಂದ್ರ ಎನ್. ಆರ್., ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ್, ವಿವಿಧ ಕಾಲೇಜುಗಳ ಪ್ರಾಂಶುಪಾಲರು /ಮುಖ್ಯಸ್ಥರು, ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜ್ಞಾನೇಶ್ ಕುಮಾರ್ ಅವರನ್ನು ಸೇವೆಯಿಂದ ವಜಾ ಮಾಡಬೇಕು; 'ಇಂಡಿಯಾ' ಮೈತ್ರಿಕೂಟದ ವತಿಯಿಂದ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ದೇಶದಲ್ಲಿ SIR ಮೂಲಕ ಒಂದು ಪಕ್ಷ ಅಧಿಕಾರ ಹಿಡಿಯಲು ಸಹಾಯ ಮಾಡಿದ ಮುಖ್ಯ ಚುನಾವಣಾಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಸೇವೆಯಿಂದ ವಜಾ ಮಾಡಬೇಕು, ಇದುವರೆಗಿನ ಖಖಖ ಪ್ರಕ್ರಿಯೆಯನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ಜನ್ ಜಿ ಹೋರಾಟ ಬೆಂಬಲಿಸಿ ಅಕ್ಟೋಬರ್ 08ರ ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಎದುರು 'ಇಂಡಿಯಾ' ಮೈತ್ರಿಕೂಟದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ. ಚಂದ್ರಶೇಖರಗೌಡ ತಿಳಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಾಯಕರೊಂದಿಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮುಖ್ಯ ಚುನಾವಣಾಯುಕ್ತರ ಕೆಲಸದ ಬಗ್ಗೆ ಸುಪ್ರೀಂ ಕೋರ್ಟ್ ಸಹ ಅಸಮಾಧಾನ ವ್ಯಕ್ತಪಡಿಸಿರುವುದು, ಜನರಿಗೆ ಖಖಖ ಹಿಂದೆ ಬಿಜೆಪಿ ಮತ್ತು RSS ನ ಹಿಡನ್ ಅಜೆಂಡಾ ಇರುವುದು ಬಹಿರಂಗಗೊಂಡಿದೆ. ಇದರ ವಿರುದ್ಧ ಎಲ್ಲಾ ನಾಗರಿಕರು ಈ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.



ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್ ಅಹಮದ್ ಮಾತನಾಡಿ, SIR ಮೂಲಕ ದೇಶದಲ್ಲಿ ಅರಾಜಕತೆ ಸೃಷ್ಟಿ ಮಾಡಲಾಗಿದೆ. ಮುಖ್ಯ ಚುನಾವಣಾಯುಕ್ತರು ಮಾಡಿರುವುದು ದೇಶದ್ರೋಹದ ಕೆಲಸ. ಹಾಗಾಗಿ ಇವರನ್ನು ಈ ಕೂಡಲೇ ವಜಾ ಮಾಡಬೇಕು. ಇಂಡಿಯಾ ಒಕ್ಕೂಟದ ಸಾಂಪ್ರದಾಯಿಕ ಮತಗಳಾದ ಅಹಿಂದ ಮತಗಳನ್ನು ಕಿತ್ತುಹಾಕಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಹಾಳುಗೆಡವಲಾಗಿದೆ. ಇದರ ವಿರುದ್ಧದ ಅಕ್ಟೋಬರ್ 08ರ ಪ್ರತಿಭಟನೆಯಲ್ಲಿ ಪ್ರಜಾಪ್ರಭುತ್ವ ಪಾಲಕರು ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಸಿಪಿಐ(ಎಂ)ನ ಸೈಯದ್ ಮುಜೀಬ್ ಮಾತನಾಡಿ, ಚುನಾವಣಾ ಆಯೋಗ ಮತದಾರರ ಹಕ್ಕುಗಳನ್ನು ರಕ್ಷಿಸುವ ಬದಲು ಹರಣ ಮಾಡಲು ಹೊರಟಿದೆ. ಚುನಾವಣಾ ಆಯೋಗದ ಗುಪ್ತ ಮಾರ್ಗದರ್ಶಿ ಜನತೆಯ ಮುಂದೆ ಅನಾವರಣಗೊಂಡಿದೆ. ಖಖಖ ಮೂಲಕ 15 ಕೋಟಿ ಮತದಾರರನ್ನು ಅಳಿಸಿ ಹಾಕಲಾಗಿದೆ. ಕಳೆದ 12 ವರ್ಷಗಳ ಕಾಲ ಬಿಜೆಪಿ ಅಧಿಕಾರದಲ್ಲಿದೆ. ಇಷ್ಟು ದೊಡ್ಡ ಪ್ರಮಾಣದ ವಲಸೆಗೆ ಅವಕಾಶ ಮಾಡಿಕೊಟ್ಟಿದ್ದಾದರೂ ಹೇಗೆ ಎಂದು ಪ್ರಶ್ನಿಸಿದರು. ಅನಗತ್ಯವಾಗಿ ಇನ್ನೊಬ್ಬರ ಹಕ್ಕು ಕಸಿಯಲು ಫಾರಂ ನಂ 07 ಸಲ್ಲಿಸಿದವರ ಮೇಲೆ ಎಫ್.ಐ.ಆರ್. ಹಾಕಿದರೆ ರಾಜ್ಯದ ವಿರೋಧ ಪಕ್ಷವಾಗಿರುವ ಬಿಜೆಪಿ ಕಾನೂನು ಕ್ರಮ ಕೈಗೊಳ್ಳದಂತೆ ಅಡ್ಡಿಪಡಿಸುತ್ತಿರುವುದನ್ನು ನೋಡಿದರೆ ನಾಚಿಕೆ ಎನಿಸುತ್ತದೆ. ಇದರ ಹಿಂದೆ ಬಿಜೆಪಿಯ ಗುಪ್ತ ಅಜೆಂಡಾ ಇರುವುದು ತಿಳಿದುಬರುತ್ತದೆ. ಹಾಗಾಗಿ ಅಕ್ಟೋಬರ್ 08ರ ಪ್ರತಿಭಟನೆಯಲ್ಲಿ ಸಂವಿಧಾನ ಪ್ರೇಮಿಗಳು ಭಾಗವಹಿಸಬೇಕೆಂದು ಸೈಯದ್ ಮುಜೀಬ್ ಮನವಿ ಮಾಡಿದರು. ಸಿಪಿಐನ ಗಿರೀಶ್ ಮಾತನಾಡಿ, ರಾಷ್ಟ್ರಪತಿಗಳಿಗೂ ಇಲ್ಲದ ವಿಶೇಷ ಅಧಿಕಾರವನ್ನು ಮುಖ್ಯ ಚುನಾವಣಾಯುಕ್ತರಿಗೆ ನೀಡಿ, ಅವರ ಮೂಲಕ ವೋಟ್ ಚೋರಿ ನಡೆಸಿ, ಅಧಿಕಾರ ಹಿಡಿಯಲು ಬಿಜೆಪಿ ಮತ್ತು ಖಖಖ ಹೊರಟಿದೆ. ಸಾಂವಿಧಾನಿಕ ಅಂಗಗಳನ್ನು ದುರುಪಯೋಗಪಡಿಸಿಕೊಂಡು, ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಮತ್ತು ಅದಕ್ಕೆ ಸಹಕರಿಸಿದ ಚುನಾವಣಾ ಮುಖ್ಯ ಆಯುಕ್ತರ ವಿರುದ್ಧ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ ಎಂದರು.

ಆಮ್ ಆದ್ಮಿ ಪಕ್ಷದ ಜಯರಾಮಯ್ಯ ಮಾತನಾಡಿ, ಮುಖ್ಯ ಚುನಾವಣಾಯುಕ್ತರಿಗಿಂತಲೂ ಮುಂಚಿತವಾಗಿ ಈ ದೇಶದ ಪ್ರಧಾನಿ ಮತ್ತು ಗೃಹ ಸಚಿವರ ರಾಜೀನಾಮೆ ಕೇಳಬೇಕಿದೆ. ಮೂವರು ಚುನಾವಣಾಯುಕ್ತರಲ್ಲಿ ಇಬ್ಬರು ವಿರೋಧ ವ್ಯಕ್ತಪಡಿಸಿದ್ದರೂ ಸಹ ಅದನ್ನು ಲೆಕ್ಕಿಸದೆ ಬಿಜೆಪಿಗೆ ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿರುವ ಜ್ಞಾನೇಶ್ ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಆರ್. ರಾಮಕೃಷ್ಣ, ಇರ್ಫಾನ್ ಅಹಮದ್, ಭೈರಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

SP NEWS ಸಣ್ ಸುದ್ದಿ



ರಾಜ್ಯ ವಿಧಾನ ಪರಿಷತ್ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆ–2026ರ ಸ್ವತಂತ್ರ ಸ್ಪರ್ಧಾ ಆಕಾಂಕ್ಷಿ ಯಾದ ಕೆ.ಜಿ.ರಂಗಸ್ವಾಮಿ (ರಂಗಸ್ವಾಮಿಗೌಡರು) ಇಂದು ನಾಮಪತ್ರವನ್ನು ಸಹಾಯಕ ಚುನಾವಣಾಧಿಕಾರಿ ಜಿ.ಪ್ರಭುರವರಿಗೆ ತಮ್ಮ ಅಪಾರ ಬೆಂಬಲಿಗರೊಂದಿಗೆ ಆಗಮಿಸಿ ಸಲ್ಲಿಸಿದರು.



ತುಮಕೂರಿನ ಶ್ರೀಕೃಷ್ಣ ಮಂದಿರದಲ್ಲಿ ಯಕ್ಷಗಾನ ಸಾಂಸ್ಕೃತಿಕ ವೇದಿಕೆಯ ಪ್ರಧಾನ ಸಂಚಾಲಕ ರಾದ ನಾಗರಾಜ ಧನ್ಯ ಮತ್ತು ಅನಂತ ರಾವ್ ರವರು ಕಳೆದ ಹದಿನಾರು ವರ್ಷ ಗಳಿಂದ ಯಕ್ಷ ಸಂಘಟನೆಯ ಸೇವೆಯನ್ನು ಪ್ರಶಂಸಿಸಿ ಸುದರ್ಶನ ವಿಜಯ ಯಕ್ಷಗಾನ ಸಂದರ್ಭದಲ್ಲಿ ಗೌರವಿಲಾಯಿತು.



ತುಮಕೂರು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಹಾಗೂ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ರಾಜ್ಯ ಕಿರಿಯ ಅಥ್ಲೆಟಿಕ್ ಕ್ರೀಡಾಕೂಟ ನಡೆಯಿತು.



ತುಮಕೂರು ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಹಾಗೂ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಕಿರಿಯ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಬಾಲಕಿಯರ ವಿಭಾಗದ 100 ಮೀಟರ್ ಓಟದಲ್ಲಿ ಉಡುಪಿಯ ಶ್ರುತಿ ಪಿ. ಶೆಟ್ಟಿ, ಚಿನ್ನದ ಪದಕ ಗೆದ್ದಿದ್ದಾರೆ. ಮೈಸೂರಿನ ಲೇಖನ್ ಎಸ್. ಪ್ರಸಾದ್ ಬೆಳ್ಳಿ ಪದಕ, ಉಡುಪಿಯ ಅನುಷಾ ಜಿ. ನಾಯಕ್ ಕಂಚಿನ ಪದಕ ಗೆದ್ದಿದ್ದಾರೆ. ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಪ್ರಭಾಕರ್, ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಬಸವರಾಜು, ದೈ. ಶಿಕ್ಷಕ ಅನಿಲ್‌ಕುಮಾರ್ ಪದಕ ವಿತರಿಸಿದರು.

ವಿವಿಧ ಸೌಲಭ್ಯ :
ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ತುಮಕೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಗೊಳಪಡುವ ವಿವಿಧ ನಿಗಮಗಳ ವತಿಯಿಂದ ಸಾಲ/ಸೌಲಭ್ಯ ಕಲ್ಪಿಸಲು ಕರೆಯಲಾಗಿದ್ದ ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15ರವರೆಗೆ ವಿಸ್ತರಿಸಲಾಗಿದೆ ಎಂದು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ, ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮ, ಕರ್ನಾಟಕ ಕಾಡುಗೊಲ್ಲ ಸಮುದಾಯ ಅಭಿವೃದ್ಧಿ ನಿಗಮಗಳಡಿ 2026–27ನೇ ಸಾಲಿನ ಸಾಲ/ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15ರವರೆಗೆ ವಿಸ್ತರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಎರಡು ಎಕರೆ ಜಮೀನನ್ನ ಜೆಸಿಎಂ
ಭೂಕಬಳಿಕೆ ಮಾಡಿಲ್ಲ: ಭೂಮಾಲಿಕ ಸ್ಪಷ್ಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ: ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿವರು ಯಾವುದೇ ರೀತಿಯಲ್ಲಿ ದೊಡ್ಡಬಿದರೆ ಗ್ರಾಮದ 2ಎಕರೆ ಭೂಕಬಳಿಕೆ ಮಾಡಿಲ್ಲ. ನಾನೇ ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದೇನೆ ಎಂದು ಭೂ ಮಾಲೀಕ ಅರುಣ್ ಕುಮಾರ್ ಹೇಳಿದರು. ಚಿಕ್ಕಬಿದರೆ ತಮ್ಮ ನೀವಾಸದಲ್ಲಿ ಮಾಧ್ಯಮದೊಂದಿಗೆ ಮಾತನಾಡಿ ಟಿವಿ ಮಾಧ್ಯಮ ವೊಂದರಲ್ಲಿ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿಯವರು 2 ಎಕರೆ ಭೂಮಿಯನ್ನ ಅಕ್ರಮವಾಗಿ ತಮ್ಮ ಪತ್ನಿ ತ್ರಿವೇಣಿರವರ ಹೆಸರಿಗೆ ನೊಂದಾವಣೆ ಮಾಡಿಸಿದ್ದಾರೆ ಎನ್ನುವ ಆರೋಪದಲ್ಲಿ ವರದಿಯಾಗಿರುವುದನ್ನ ನಾನು ನೋಡಿದೆ. ಈ ಆರೋಪವು ಸತ್ಯಕ್ಕೆ ದೂರವಾಗಿದೆ. ಈ 2ಎಕರೆ ಸಂಬಂದಿಸಿದಂತೆ ಸುನಿಲ್ ಕುಮಾರ್ ಎಂಬುವರಿಗೆ ಮಾರಾಟದ ಕರಾರು ಪತ್ರವನ್ನ ನೊಂದನಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿಸಲಾಗಿತ್ತಾದರು ಆನಂತರ ಸುನಿಲ್ ಕುಮಾರ್ ರವರೆ ಸ್ವತಃ ಬಂದು ಮಾರಾಟದ ಕರಾರನ್ನ ವಜಾಗೊಳಿಸಿದರು. ನಾವು ಕೊಬ್ಬರಿ ವರ್ತಕರು ನಮ್ಮ ತಾತನ ಕಾಲದಿಂದಲೂ ಜೆಸಿಎಂ ರವರ ವಿಶ್ವಾಸ ಬಾಂಧವ್ಯವು ಉಳಿದುಕೊಂಡು ಬಂದಿದೆ. ನನ್ನ ಹಣಕಾಸಿನ ವ್ಯೆವಹಾರದಲ್ಲಿ ತೊಂದರೆ ಇದ್ದುದ್ದರಿಂದ ದೊಡ್ಡಬಿದರೆ ಗ್ರಾಮದ ಅದೇ ಸರ್ವೆನಂ 6/1 2ಎಕರೆ ಜಮೀನನ್ನ ಜೆ.ಸಿ.ಎಂ ರವರ ಪತ್ನಿ ತ್ರಿವೇಣಿ ಮಾಧುಸ್ವಾಮಿಯವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದೀನಿ. ರಾಜ್ಯ ನಾಯಕರಾದ ಜೆ.ಸಿ.ಎಂ ರವರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನ ಕಾಣದ ಕೈಗಳು ಕೆಲಸಮಾಡಿವೆ ಎಂದರು.

ಅಪ್ರಾಪ್ತ ಮಗಳೊಂದಿಗೆ ಅಪಾಯಕಾರಿ ಶಿಥಿಲ ಮನೆಯಲ್ಲಿ ವಿಧವೆಯೊಬ್ಬರ ಜೀವನ
ತುರ್ತು ವಸತಿ ಹಾಗೂ ಸರ್ಕಾರಿ ಸೌಲಭ್ಯಗಳಿಗೆ ಮಾತಂಗ ಮುನಿ ಪರಿವಾರ ತಹಸೀಲ್ದಾರರಿಗೆ ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ : ತಾಲ್ಲೂಕಿನ ಅಜ್ಜಿಗುಡ್ಡೆ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ವಿಧವೆಯೊಬ್ಬರು ತಮ್ಮ ಅಪ್ರಾಪ್ತ ಮಗಳೊಂದಿಗೆ ಅಪಾಯಕಾರಿ ಶಿಥಿಲ ಮನೆಯಲ್ಲಿ ಜೀವನ ನಡೆಸುತ್ತಿರುವುದು ಬೆಳಕಿಗೆ ಬಂದಿದ್ದು, ಕುಟುಂಬಕ್ಕೆ ತುರ್ತು ವಸತಿ ಹಾಗೂ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸುವಂತೆ ಮಾತಂಗ ಮುನಿ ಪರಿವಾರ ಸೇವಾ ಟ್ರಸ್ಟ್ (ರಿ.) ವತಿಯಿಂದ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಗಿದೆ.

ಅಜ್ಜಿ ಗುಡ್ಡೆ ಗ್ರಾಮಕ್ಕೆ ಅಕ್ಟೋಬರ್ 5 ರಂದು ಭೇಟಿ ನೀಡಿದ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು ಅಲ್ಲಿನ ಕುಟುಂಬಗಳ ಸಾಮಾಜಿಕ, ಆರ್ಥಿಕ ಮತ್ತು ವಸತಿ ಪರಿಸ್ಥಿತಿಯನ್ನು ಪರಿಶೀಲಿಸುವ ಸಂದರ್ಭದಲ್ಲಿ ಜಯಮ್ಮ (47) ಅವರ ಕುಟುಂಬದ ದುಸ್ಥಿತಿ ಗಮನಕ್ಕೆ ಬಂದಿದೆ.





ಜಯಮ್ಮ ಅವರು ಪರಿಶಿಷ್ಟ ಜಾತಿಯ ಮಾದಿಗ ಸಮುದಾಯಕ್ಕೆ ಸೇರಿದ ವಿಧವೆಯಾಗಿದ್ದು, ಅವರ ಪತಿ ನರಸಿಂಹಯ್ಯ ಅವರು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ. ಪ್ರಸ್ತುತ ಜಯಮ್ಮ ಅವರು ಕೂಲಿ ಕೆಲಸ ಮಾಡಿ ಕೊಂಡು ಜೀವನ ನಡೆಸುತ್ತಿದ್ದಾರೆ. ಸ್ವತಃ ಅನಾರೋಗ್ಯದಿಂದ ಬಳಲುತ್ತಿರುವ ಅವರು ತಮ್ಮ ಮಗಳು ಅಮೂಲ್ಯಳನ್ನು ಸಾಕಿ, ಆಕೆಯ ಶಿಕ್ಷಣವನ್ನು ಮುಂದುವರಿಸುವುದು ಕಷ್ಟಕರವಾಗಿದೆ. ತಂದೆಯನ್ನು ಕಳೆದು ಕೊಂಡಿರುವ ಅಮೂಲ್ಯ ಅಜ್ಜಿ ಗುಡ್ಡೆ ಸರ್ಕಾರಿ ಶಾಲೆಯಲ್ಲಿ ಪ್ರಥಮ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ.

ಇನ್ನೊಂದೆಡೆ, ಕುಟುಂಬ ವಾಸಿಸುತ್ತಿರುವ ಮನೆ ತೀವ್ರ ಶಿಥಿಲಾವಸ್ಥೆಯಲ್ಲಿದ್ದು, ಈಗಾಗಲೇ ಮನೆಯ ಒಂದು ಗೋಡೆ ಕುಸಿದಿದೆ. ಉಳಿದ ಭಾಗವೂ ಅಪಾಯಕಾರಿಯಾಗಿದ್ದು, ಮಳೆ–ಗಾಳಿಯ ಸಂದರ್ಭದಲ್ಲಿ ಮನೆ ಮತ್ತಷ್ಟು ಕುಸಿಯುವ ಆತಂಕವಿದೆ. ಮನೆಯಲ್ಲಿ ಅಪ್ರಾಪ್ತ ಬಾಲಕಿ ಇರುವ ಹಿನ್ನೆಲೆಯಲ್ಲಿ ತಾಯಿ ಮತ್ತು ಮಗಳ ಜೀವ ಹಾಗೂ ಸುರಕ್ಷತೆಯ ಬಗ್ಗೆಯೂ ಆತಂಕ ವ್ಯಕ್ತವಾಗಿದೆ.

ಈ ಹಿನ್ನೆಲೆಯಲ್ಲಿ ಕುಟುಂಬದ ಮನೆ ಹಾಗೂ ವಾಸ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತುರ್ತು ಪರಿಶೀಲನೆ ನಡೆಸಿ, ಅಗತ್ಯವಿದ್ದಲ್ಲಿ ತಾತ್ಕಾಲಿಕ ಸುರಕ್ಷಿತ ಆಶ್ರಯ ಕಲ್ಪಿಸುವುದರ ಜೊತೆಗೆ, ಕುಟುಂಬದ ಅರ್ಹತೆಯನ್ನು ಪರಿಗಣಿಸಿ ಸರ್ಕಾರಿ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಬೇಕು ಎಂದು ಅಧ್ಯಕ್ಷರಾದ ತೇಜಾ ಡಿ.ಎಸ್.ರವರು ಮನವಿ ಮಾಡಿದ್ದಾರೆ.

ಅಲ್ಲದೆ, ಜಯಮ್ಮ ಅವರಿಗೆ ಸಮಾಜ ಕಲ್ಯಾಣ ಇಲಾಖೆಯಡಿ ಲಭ್ಯವಿರುವ ಗ್ರಾಮ ಪಂಚಾಯಿತಿ ಯ ಶೇ.25ರಷ್ಟು ನಿಧಿ ಹಾಗೂ ತಾಲ್ಲೂಕು ಆಡಳಿತದಡಿ ಲಭ್ಯವಿರುವ ವಿಪತ್ತು ಮತ್ತು ತುರ್ತು ಪರಿಹಾರ ವ್ಯವಸ್ಥೆಗಳ ಮೂಲಕ, ನಿಯಮಾನುಸಾರ ಸಾಧ್ಯವಿರುವ ತುರ್ತು ಹಣ ಕಾಸಿನ ನೆರವು ನೀಡಿ ಮನೆ ದುರಸ್ತಿ ಹಾಗೂ ಸುರಕ್ಷತಾ ಕ್ರಮಗಳಿಗೆ ಅನುದಾನ ಒದಗಿಸುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿ ದ್ದಾರೆ.

ಅದೇ ರೀತಿ, ಕುಟುಂಬಕ್ಕೆ ಪರಿಶಿಷ್ಟ ಜಾತಿಯವರಿಗೆ ಲಭ್ಯವಿರುವ ಸರ್ಕಾರಿ ಯೋಜನೆಗಳು, ಸಾಮಾಜಿಕ ಭದ್ರತಾ ಸೌಲಭ್ಯಗಳು ಹಾಗೂ ಇತರೆ ಅರ್ಹ ನೆರವುಗಳನ್ನು ಒದಗಿಸುವುದರ ಜೊತೆಗೆ, ತಂದೆಯನ್ನು ಕಳೆದು



ಕೊಂಡಿರುವ ಅಪ್ರಾಪ್ತ ಬಾಲಕಿ ಅಮೂಲ್ಯಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಲಭ್ಯವಿರುವ ಶೈಕ್ಷಣಿಕ, ಪೌಷ್ಟಿಕ ಹಾಗೂ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕಲ್ಪಿಸುವಂತೆ ಪ್ರಧಾನ ಕಾರ್ಯದರ್ಶಿ ಶಾಂತ ರಾಜು ಡಿ ರವರು ಒತ್ತಾಯಿಸಿದ್ದಾರೆ.

ತಹಸೀಲ್ದಾರ್, ಸಮಾಜ ಕಲ್ಯಾಣ ಇಲಾಖೆ, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಮನ್ವಯದಿಂದ ತುರ್ತು ಕ್ರಮ ಕೈಗೊಂಡು, ಈ ಕುಟುಂಬಕ್ಕೆ ಅಗತ್ಯ ನೆರವು ಒದಗಿಸಬೇಕು ಎಂದು ಮಾತಂಗ ಮುನಿ ಪರಿವಾರ ಸೇವಾ ಟ್ರಸ್ಟ್ ಉಪಾಧ್ಯಕ್ಷ ಗುರು ಮೂರ್ತಿ, ಸದಸ್ಯರಾದ ನಿರ್ಮಲ ಹಾಗೂ ವಿದ್ಯಾರ್ಥಿ ಲಲಿತ ಹಾಗೂ ಕಾನೂನು ವಿದ್ಯಾರ್ಥಿ ದೇವರಾಜು ಮನವಿ ಮಾಡಿದ್ದಾರೆ.

300ಕ್ಕೂ ಹೆಚ್ಚು ಸಂಸದರು ಚುನಾವಣಾ ಆಯುಕ್ತರನ್ನು ಭೇಟಿಯಾಗಲು ಬಂದಿದ್ದೇವೆ

ನವದೆಹಲಿ: SIR ಮತ್ತು ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾರನ್ನು ಪೊಲೀಸರು ವಶಕ್ಕೆ ಪಡೆದಿದ್ದು 9 ಗಂಟೆಗಳ ಕಾಲ ಧರಣಿಗೆ ಬ್ರೇಕ್ ಬಿದ್ದಿದೆ. ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿಯನ್ನು ಕಿಂಗ್ಸ್‌ವೇ ಕ್ಯಾಂಪ್‌ಗೆ ಕರೆದೊಯ್ಯಲಾಗುತ್ತಿದೆ.

ಪ್ರತಿಭಟನಾ ಸ್ಥಳದಲ್ಲಿ ಭಾರಿ ಗದ್ದಲ ಕಂಡುಬಂದಿದೆ. ಪೊಲೀಸರು ಪ್ರತಿಭಟನಾ ನಾಯಕರನ್ನು ತೆರವುಗೊಳಿಸುತ್ತಿದ್ದಾರೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಚರಣ್‌ಜಿತ್ ಸಿಂಗ್ ಚನ್ನಿ, ದೀಪೇಂದರ್ ಹೂಡಾ ಮತ್ತು ಪವನ್ ಖೇರಾ ಸೇರಿದಂತೆ ಹಲವಾರು ನಾಯಕರನ್ನು ವಶಕ್ಕೆ ಪಡೆಯಲಾಗಿದೆ. ಚುನಾವಣಾ ಆಯೋಗದ ಮೂಲಗಳ ಪ್ರಕಾರ, ಕಾಂಗ್ರೆಸ್ ಪಕ್ಷದಿಂದ ಸಭೆಗಾಗಿ ಆಯೋಗಕ್ಕೆ ಯಾವುದೇ ವಿನಂತಿ ಬಂದಿಲ್ಲ. ಇದಲ್ಲದೆ, ಚುನಾವಣಾ ಆಯೋಗಕ್ಕೆ ಯಾವುದೇ ಇತರ ವಿರೋಧ ಪಕ್ಷದಿಂದ ಸಭೆಗಾಗಿ ಯಾವುದೇ ವಿನಂತಿ ಬಂದಿಲ್ಲ ಎಂದು ಹೇಳಿದೆ.

300ಕ್ಕೂ ಹೆಚ್ಚು ಸಂಸದರು ಚುನಾವಣಾ ಆಯುಕ್ತರನ್ನು ಭೇಟಿಯಾಗಲು ಬಂದಿದ್ದೇವೆ. ಭೇಟಿಯಾಗದೇ ತೆರಳುವುದಿಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದರು. ರಾಷ್ಟ್ರದ ಧ್ವನಿಯನ್ನು ಅವಮಾನಿಸಲಾಗಿದೆ. ರಾಹುಲ್ ಗಾಂಧಿ ಚುನಾವಣಾ ಆಯೋಗವನ್ನು ಭೇಟಿ ಮಾಡಿ 'ನೀವು ಮತವನ್ನು ಕದ್ದಿದ್ದೀರಿ' ಎಂದು ಹೇಳಲು ಬಯಸಿದ್ದೇನೆ ಎಂದು ಹೇಳಿದರು.

ಯುವನಿಧಿ ಯೋಜನೆ ಸ್ವಯಂ ಘೋಷಣೆ ಕಡ್ಡಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು:ರಾಜ್ಯಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ "ಯುವನಿಧಿ ಯೋಜನೆ" ಯಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ಜಾಲತಾಣ https://sevaone.karnataka.gov.in ಮೂಲಕ ಕಡ್ಡಾಯವಾಗಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂದು ಪರಿಶೀಲಿಸಿಕೊಳ್ಳತಕ್ಕದ್ದು. ಈಗಾಗಲೇ ನೋಂದಾಯಿಸಿಕೊಂಡು ಯೋಜನೆಯಡಿ ಹಣವನ್ನು ಪಡೆಯುತ್ತಿರುವ ಫಲಾನುಭವಿಗಳು "ಸ್ವಯಂ ಘೋಷಣೆ" ಮಾಡತಕ್ಕದ್ದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಸೂಚಿಸಿದ್ದಾರೆ. ಫಲಾನುಭವಿಗಳು ಪ್ರತಿ ತಿಂಗಳಿಗೊಮ್ಮೆ(ಮಾಸಿಕ) ಸಲ್ಲಿಸತಕ್ಕದ್ದು. ಸ್ವಯಂ ಘೋಷಣೆಯನ್ನು ಪ್ರತಿ ತಿಂಗಳ 25ರೊಳಗಾಗಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ದೂರವಾಣಿ: 0816–2278488ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಲಾಶಯದಲ್ಲಿ ನೀರು ಪೋಲಾಗುತ್ತಿರುವುದನ್ನು ತಡೆಗಟ್ಟಿ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂಗಳೂರು, ಮಾರ್ಖಂಡೇಯ ಜಲಾಶಯದಲ್ಲಿ ನೀರು ಪೋಲಾಗುತ್ತಿರುವುದನ್ನು ತಡೆಗಟ್ಟಿ, ಜಲಾಶಯದ ಪುನಶ್ಚೇತನಕ್ಕೆ ಮೊದಲ ಆದ್ಯತೆ ನೀಡುವಂತೆ ಜಲ ಸಂಪನ್ಮೂಲ ಸಚಿವ ಎನ್. ಚೆಲುವರಾಯಸ್ವಾಮಿ ಅವರು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ವಿಕಾಸಸೌಧದ ಕೊಠಡಿ ಸಂಖ್ಯೆ 317ರಲ್ಲಿ ಮಂಗಳವಾರ ನಡೆದ ಬೆಳಗಾವಿ ಜಿಲ್ಲೆಯ ನೀರಾವರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಸಭೆಯಲ್ಲಿ ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಉಪಸ್ಥಿತರಿದ್ದರು.

ಸಭೆಯಲ್ಲಿ ಮಾತನಾಡಿದ ಸಚಿವ ಚೆಲುವರಾಯಸ್ವಾಮಿ ಅವರು, ಮಾರ್ಖಂಡೇಯ ಜಲಾಶಯದಲ್ಲಿ ನೀರು ಪೋಲಾಗುತ್ತಿರುವ ವಿಚಾರ ಗಂಭೀರವಾಗಿದೆ. ಜಲಾಶಯದಲ್ಲಿ ಸಂಗ್ರಹವಾಗುವ ಅಮೂಲ್ಯ ನೀರು ಸೋರಿಕೆ ಅಥವಾ ಇತರೆ ಕಾರಣಗಳಿಂದ ವ್ಯರ್ಥವಾಗದಂತೆ ತಾಂತ್ರಿಕವಾಗಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಜಲಾಶಯದಲ್ಲಿ ನೀರು ಉಳಿದರೆ ಮಾತ್ರ ರೈತರ ಹೊಲಗಳಿಗೆ ನೀರು ತಲುಪುತ್ತದೆ, ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಕಷ್ಟವಾಗುತ್ತದೆ. ವಿಳಂಬ ಮಾಡದೆ ತುರ್ತಾಗಿ ಶಾಶ್ವತ ಪರಿಹಾರ ಕಂಡುಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಲಾಶಯದ ರಚನೆ, ನೀರು ಸೋರಿಕೆ ಸೇರಿದಂತೆ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿ ಡ್ಯಾಂ ರೆಜಿನುವೇಷನ್ (ಪುನಶ್ಚೇತನ) ಕಾಮಗಾರಿ ಕೈಗೆತ್ತಿಕೊಳ್ಳುವಂತೆಯೂ ಸೂಚನೆ ನೀಡಿದರು.

ಬೆಳಗಾವಿ ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ಬಾಕಿ ಉಳಿದಿರುವ ಮತ್ತು ಅಪೂರ್ಣಗೊಂಡಿರುವ ನೀರಾವರಿ ಕಾಮಗಾರಿಗಳನ್ನು ವರ್ಷಗಟ್ಟಲೆ ಬಾಕಿ ಉಳಿಸಬಾರದು. ಕಾಮಗಾರಿ ಆರಂಭಿಸಿ ಅರ್ಧಕ್ಕೆ ನಿಲ್ಲಿಸುವುದರಿಂದ ಸಾರ್ವಜನಿಕ ಹಣ ಪೋಲಾಗುತ್ತದೆ. ತಾಂತ್ರಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವತ್ತ ಗಮನಹರಿಸಿ ಎಂದು ನಿರ್ದೇಶನನೀಡಿದರು. ಇದೇವೇಳೆ ಮಾರ್ಖಂಡೇಯ ಬಲದಂಡೆ ಯೋಜನೆಯ ಸುಧಾರಣೆ ಕುರಿತು ಚರ್ಚಿಸಲಾಯಿತು. ಯೋಜನೆಯಡಿ ನೀರಾವರಿ ಸೌಲಭ್ಯ ಪರಿಣಾಮಕಾರಿಯಾಗಿ ರೈತರಿಗೆ ತಲುಪುವಂತೆ ಇರುವ ಸಮಸ್ಯೆಗಳನ್ನು ಗುರುತಿಸಿ ಅಗತ್ಯ ಸುಧಾರಣಾ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸಚಿವರು ಸೂಚಿಸಿದರು.

ಸಭೆಯಲ್ಲಿ ಕರ್ನಾಟಕ ನೀರಾವರಿ ನಿಗಮದ ಅಧಿಕಾರಿಗಳು, ಇಬ್ಬರು ಸಚಿವರ ಆಪ್ತ ಕಾರ್ಯದರ್ಶಿಗಳು ಹಾಗೂ ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

ಫ್ಲೆಕ್ಸ್ ಹಾಕಲು ಪಾಲಿಕೆಗೆ



ಪಡೆಯಬೇಕು, ಈಗ ಚುನಾಯಿತ ಸದಸ್ಯರು ಇಲ್ಲದ ಕಾರಣದಿಂದ ಆಡಳಿತಾಧಿಕಾರಿ ಅನುಮತಿ ಪಡೆಯಬೇಕಿದ್ದು, ಅನುಮತಿ ಪಡೆಯದೆ ನಿಯಮ ಉಲ್ಲಂಘಿಸಿ ಜನರ ಹಣ ದುರುಪಯೋಗ ಮಾಡಿಕೊಳ್ಳಲಾಗಿದೆ. ಫ್ಲೆಕ್ಸ್ ಹಾಕಲು ಪಾಲಿಕೆಗೆ ಶುಲ್ಕ ಕಟ್ಟಿ ಅನುಮತಿ ಪಡೆಯಬೇಕು ಆದರೆ, ದಸರಾ ಉತ್ಸವ ಸಮಿತಿಯವರು ಯಾವುದೇ ಫ್ಲೆಕ್ಸ್‌ಗೆ ಅನುಮತಿ ಪಡೆದಿಲ್ಲ, ಶುಲ್ಕ ಪಾವತಿಸಿಲ್ಲ. ಗಣೇಶೋತ್ಸವದಲ್ಲಿ ಮಾತ್ರ ಕಾನೂನು ಪಾಲಿಸುವ ದಸರಾ ಆಚರಣೆಗೆ ಯಾವುದೇ ನಿಯಮ ಪಾಲಿಸುತ್ತಿಲ್ಲ ಎಂದು ದೂರಿದರು.

ದಸರಾದ ಮೆರವಣಿಗೆಗೂ ಅನುಮತಿ ಪಡೆಯುತ್ತಿಲ್ಲ, ನಗರದಲ್ಲಿ ಮಾಡುವ ದೀಪ ಅಲಂಕಾರಕ್ಕೆ ಬೆಸ್ಕಾಂಗೆ ಶುಲ್ಕ ಪಾವತಿಸಬೇಕು, 60 ಕಿ.ವ್ಯಾಟ್ ಪ್ರತಿದಿನ ವಿದ್ಯುತ್ ಬಳಸಿದ್ದು ಲಕ್ಷಾಂತರ ರೂ. ಪಾವತಿಸಬೇಕಾಗಿದ್ದು, ಪಾವತಿಸದೆ ಬೆಸ್ಕಾಂಗೂ ವಂಚಿಸಲಾಗಿದೆ. ದಸರಾ ಉತ್ಸವದಲ್ಲಿ ಜಿಲ್ಲಾಡಳಿತವು ಎಲ್ಲಾ ಹಂತಗಳಲ್ಲೂ ನಿಯಮಗಳನ್ನು ಉಲ್ಲಂಘಿಸಿ, ಅಧಿಕಾರ ದುರುಪಯೋಗ ಮಾಡಿಕೊಳ್ಳಲಾಗಿದೆ. ಈ ದೇಶದ ಕಾನೂನಿಗೆ ಜಿಲ್ಲಾಡಳಿತವು ಅತೀತವೇ? ಎಂದು ಪ್ರಶ್ನಿಸಿದರು. ರಾಷ್ಟ್ರೀಯ ಮಾನವ ಪರಿಸರ ಸಂರಕ್ಷಣಾ ಪಡೆ ಬಿ.ಆರ್. ವಿಜಯಕುಮಾರ್, ಶ್ರುತಿ ಹಾಜರಿದ್ದರು.

ಅಂಗನವಾಡಿ ನೌಕರರಿಗೆ ಕನಿಷ್ಠ ವೇತನ, ಪಿಂಚಣಿ ಜಾರಿಗೆ ಸರ್ಕಾರಗಳು ಮುಂದಾಗಲಿ

ಸೂರ್ಯಪ್ರಗತಿನ್ಯೂಸ್.ಕಾಂ



ಕೇಂದ್ರ ರಾಜ್ಯ ಸರ್ಕಾರಗಳು ಎಲ್ಲಾ ಯೋಜನೆಗಳ ಜಾರಿಗೆ ಅಂಗನವಾಡಿ ನೌಕರನ್ನು ದುಡಿಸಿಕೊಳ್ಳುತ್ತಿದೆ. ಯೋಜನೆ 50 ವರ್ಷಗಳು ದಾಟಿವೆ, ಅದರೆ ಇದರಲ್ಲಿ ದುಡಿಯುವ ಅಂಗನವಾಡಿ ಕಾರ್ಯಕರ್ತೆ–ಸಹಾಯಕಿಯರಿಗೆ ಕನಿಷ್ಟ ವೇತನ ,ಪಿಂಚಣಿ. ಮತ್ತಿತರೆ ಸಾಮಾಜಿಕ ಭದ್ರತೆಗಳು ಇಲ್ಲದೆ ದುಡಿಸುವುದು ಸರಿಯಲ್ಲ , ಭಾರತೀಯ ಕಾರ್ಮಿಕ ಸಮ್ಮೇಳನದ ತೀರ್ಮಾನದಂತೆ ಕಾರ್ಮಿಕರೆಂದು ಪರಿಗಣಿಸಿ. ತಕ್ಷಣ ನೌಕರರಿಗೆ ಕನಿಷ್ಟ ವೇತನ, ಮತ್ತು ಪಿಂಚಣಿ ಒಳಗೊಂಡ ಸಾಮಾಜಿಕ ಭದ್ರತೆಯನ್ನು ಜಾರಿಗೆ ಕ್ರಮ ವಹಿಸುವಂತೆ ಸಿಐಟಿಯು ಜಿಲ್ಲಾ ಅಧ್ಯಕ್ಷ ರಾದ ಸೈಯದ್ ಮುಜೀಬ್ ಅವರು ಒತ್ತಾಯಿಸಿದರು , ಅವರು ದಿನಾಂಕ; 6–10–2026 ರಂದು ನಗರದ ಜನ ಚಳುವಳಿ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿನೌಕರ ಸಂಘ .ರಿ ಸಿಐಟಿಯು ತುಮಕೂರು ನಗರ ಸಮ್ಮೇಳವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರಿದು ಮಾನತಾಡಿದ ಅವರು ಅಸಮಾನತೆ– ಲಾಭದಾಹಿತನವೆ ಪ್ರಧಾನವಾಗಿ ಇಂದು ಮಾನವೀಯತೆ ಮರಿಚಿಕೆಯಾಗುತ್ತಿದೆ. ಶ್ರೀಮಂತರ ಸಹಸ್ರಾರು ಕೋಟಿ ಸಾಲಮನ್ನ ಮಾಡುವ ಸರ್ಕಾರಗಳು ದುಡಿದು ತಿನ್ನುವವರಿಗೆ ಕನಿಷ್ಟ ವೇತನ ನೀಡಲು ಹಿಂದೇಟು ಹಾಕುತ್ತಿರುವುದು ಸರಿಯಲ್ಲ ಎಂದು ಕುಟುಕಿದರು.

ಸಮ್ಮೇಳದಲ್ಲಿ ಮುಖ್ಯ ಅಥಿತಿಗಾಗಿ ಮಾತನಾಡಿದ ಸಂಘ ಜಿಲ್ಲಾ ಅಧ್ಯಕ್ಷರಾದ ಜಿ. ಕಮಲ ಅವರು ಕೇಂದ್ರಸರ್ಕಾರ 2018 ರಿಂದ ಅಂಗವಾಡಿ ನೌಕರರಿಗೆ ಒಂದು ನಯಾ ಪೈಸೆ ಸಂಬಳ ಹೆಚ್ಚಿಸಿಲ್ಲ, ಬೆಲೆ ಏರಿಕೆಯಿಂದಾಗಿ ಬದುಕು ದುಸ್ತರವಾಗಿದೆ. ನಿರಂತರ ಹೋರಾಟಗಳಿಗೆ ಸರ್ಕಾರಗಳ ಸ್ಪಂಧನೆ ಇಲ್ಲದೆ ಪರಿಸ್ಥಿತಿ ಬದಲಿಸಿ – ಸಮಸ್ಯೆಗಳಿಗೆ ಪರಿಹಾರಕ್ಕೆ ಸರ್ಕಾರ ಮುಂದಾಗುವಂತೆ ಆಗ್ರಹಿಸಿದರು.

ಅರುಂಭದಲ್ಲಿ ಪುಷ್ಪಕೆ ಅವರು ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಜಬಿನಾ ಖಾತೋನ್ ಅವರು ತ್ರೈವಾರ್ಷಿಕ ವರಧಿ ಮಂಡಿಸಿದರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ತಾ; ಅಧ್ಯಕ್ಷರಾದ ಗೌರಮ್ಮ.ಬಿ.ಕೆ. ವಹಿಸಿದ್ದರು. ಸಮ್ಮೇಳವು ಮುಂದಿನ ಮೂರು ವರ್ಷಕ್ಕೆ ಪದಾಧಿಕಾರಿಗಳ ಚುನಾವಣೆ ನಡೆದು ಈ ಕೆಳಕಂಡತೆ ಅಯ್ಕೆ ಮಾಡಲಾಗಿದೆ.

ಅಧಕ್ಷರು; ಬಿ.ಕೆ. ಗೌರಮ್ಮ ಪ್ರಧಾನ ಕಾರ್ಯಧರ್ಶಿ ಜಬೀನಾ ಖಾತೋನ್, ಖಜಾಂಚಿ ; ಪುಷ್ಪಲತಾ ಎಸ್. ಉಪಾಧ್ಯಕ್ಷರು ; ಕೋಮಲ, ರಾಧಾಮಣಿ. ಮಮತ, ಹಂಸ. ಎಸ್. ಮೋಹಸೀನಾ, ಕಾರ್ಯದರ್ಶಿ; ಭಾಗ್ಯಮ್ಮ. ವಿ, ಬಷೀರ್ ಉನ್ನಿಸಾ, ಪುಷ್ಪ .ಕೆ. ನಾಗರತ್ನ.ಡಿ. ಪವಿತ್ರ, ಯಶೋಧಮ್ಮ, ಮೋಹಸಿನಾ ಅವರನ್ನು ಅವಿರೋಧವಾಗಿ ಅಯ್ಕೆಮಾಡಲಾಯಿತು.

ಕ್ರೀಡಾ ಸಾಧಕರನ್ನ ಗುರ್ತಿಸಿ ಸತ್ಕರಿಸುವುದರಿಂದ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಹಿರಿಯರ ವಿಶ್ವ ಅಥ್ಲೆಟಿಕ್ ಕ್ರೀಡಾಕೂಟದ ಜಾವಲಿನ್ ಥ್ರೋ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಹಿರಿಯ ಮಹಿಳಾ ಕ್ರೀಡಾಪಟು ಶಾಲಿನಿ ಶೆಟ್ಟಿ ಅವರನ್ನು ತುಮಕೂರಿನ ಮುಂಜಾನೆ ಗೆಳೆಯರ ಬಳಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ದಸರಾ ರಾಜ್ಯಮಟ್ಟದ ಕ್ರೀಡಾಕೂಟದ ಅಂಗವಾಗಿ ಉಡುಪಿ ಜಿಲ್ಲಾತಂಡದ ವ್ಯವಸ್ಥಾಪಕರಾಗಿ ಆಗಮಿಸಿದ್ದ ಶಾಲಿನಿ ಶೆಟ್ಟಿಯವರನ್ನು ಮುಂಜಾನೆ ಗೆಳೆಯರ ಬಳಗದ ಸದಸ್ಯರುಗಳು, ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಶಾಲು, ಹಾರ ಹಾಕಿ ಗೌರವಿಸಿದರು. ಈ ವೇಳೆ ಮಾತನಾಡಿದ ಹಿರಿಯ ಕ್ರೀಡಾಪಟು ಟಿ.ಕೆ. ಆನಂದ್, "ಶಾಲಿನಿ ಶೆಟ್ಟಿ ಮತ್ತು ನಾನು ಹಲವಾರು ಹಿರಿಯರ ಕ್ರೀಡಾಕೂಟಗಳಲ್ಲಿ ಒಟ್ಟಿಗೆ ಭಾಗವಹಿಸಿದ್ದೇವೆ. ಅವರ ಕ್ರೀಡಾಸ್ಫೂರ್ತಿಗೆ ನಾನು ಮಾರು ಹೋಗಿದ್ದೇನೆ. ಅಂತಹವರು ಒಂದು ಜಿಲ್ಲಾತಂಡವನ್ನು ಮುನ್ನಡೆಸುತ್ತಿರುವುದು ಸಂತೋಷದ ವಿಚಾರ. ಈ ವಯಸ್ಸಿನಲ್ಲಿಯೂ ಕಿರಿಯರೊಂದಿಗೆ ಸೇರಿ ತನ್ನ ಕ್ರೀಡಾ ಸ್ಫೂರ್ತಿಯನ್ನು ಮೆರೆಯುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಅವರನ್ನು ಗೌರವಿಸಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ' ಎಂದರು.

ತುಮಕೂರು ನಗರವನ್ನು ಶೈಕ್ಷಣಿಕ ನಗರಿಯ ಜೊತೆಗೆ, ಕ್ರೀಡಾನಗರಿಯಾಗಿಯೂ ರೂಪಿಸಲು ಡಾ. ಜಿ. ಪರಮೇಶ್ವರ್ ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರಿಂದ ಅನೇಕ ಕ್ರೀಡಾ ಸೌಲಭ್ಯಗಳು ಜಿಲ್ಲೆಯ ಕ್ರೀಡಾಪಟುಗಳಿಗೆ ದೊರೆತಿವೆ. ಮಹಾತ್ಮ ಗಾಂಧಿ ಕ್ರೀಡಾಂಗಣ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿದ್ದರೆ ಅದಕ್ಕೆ ಡಾ. ಜಿ. ಪರಮೇಶ್ವರ್ ಕಾರಣ ಎಂದು ಟಿ.ಕೆ. ಆನಂದ್ ಪ್ರಶಂಸಿಸಿದರು.\ಕನ್ನಡ ಸೇನೆಯ ಜಿಲ್ಲಾಧ್ಯಕ್ಷ ಧನಿಯಕುಮಾರ್ ಮಾತನಾಡಿ, "ಮುಂಜಾನೆ ಗೆಳೆಯರ ಬಳಗ ಆರಂಭದಿಂದಲೂ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಲೇ ಬಂದಿದೆ. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ, ಪದಕ ಗಳಿಸಿದ ರಾಜ್ಯದ ಕ್ರೀಡಾಪಟುಗಳನ್ನು ಗುರುತಿಸಿ, ಅವರನ್ನು ಅಭಿನಂದಿಸುವ ಮೂಲಕ ಅವರ ಮತ್ತಷ್ಟು ಸಾಧನೆಯತ್ತ ಹೆಜ್ಜೆ ಹಾಕುವಂತೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಲ್ಲದೆ ಬಡ ಕ್ರೀಡಾಪಟುಗಳಿಗೆ ಅಗತ್ಯ ಸಲಕರಣೆಯನ್ನು ದಾನಿಗಳ ಸಹಕಾರದಿಂದ ದೊರೆಯುವಂತೆ ಮಾಡಿ, ಅವರ ಸಾಧನೆಗೆ ಮೆಟ್ಟಿಲಾಗಿ ಮುಂಜಾನೆ ಗೆಳೆಯರ ಬಳಗ ಕೆಲಸ ಮಾಡುತ್ತಿದೆ. ಉಡುಪಿಯ ಶಾಲಿನಿ ಶೆಟ್ಟಿಯವರು ಆಸ್ಟ್ರೇಲಿಯಾದಲ್ಲಿ ನಡೆದ ಹಿರಿಯರ ವಿಶ್ವ ಅಥ್ಲೆಟಿಕ್ ಕ್ರೀಡಾಕೂಟದ ಜಾವಲಿನ್ ಥ್ರೋನಲ್ಲಿ ಚಿನ್ನದ ಪದಕ ಪಡೆದಿರುವುದು ಇಡೀ ರಾಜ್ಯವೇ ಹೆಮ್ಮೆ ಪಡುವಂತಹ ಸಾಧನೆ. ಹಾಗಾಗಿ ಇಂದು ಅವರ ಜೊತೆಗೆ, ಅವರು ಪ್ರತಿನಿಧಿಸುತ್ತಿರುವ ಉಡುಪಿ ತಂಡವನ್ನು ಸಹ ಅಭಿನಂದಿಸಲಾಗುತ್ತಿದೆ" ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಹಿರಿಯ ಕ್ರೀಡಾಪಟು ಶಾಲಿನಿ ಶೆಟ್ಟಿ, "ಮುಂಜಾನೆ ಗೆಳೆಯರ ಬಳಗ, ಕನ್ನಡ ಸೇನೆ ಕಾರ್ಯಕರ್ತರ ಕಾರ್ಯ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ನನ್ನ ಜೊತೆಗೆ ಹಲವಾರು ಪದಕ ಪಡೆದ ನಮ್ಮ ಮಕ್ಕಳನ್ನು ಅಭಿನಂದಿಸಿರುವುದು ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದೆ. ಇದಕ್ಕಾಗಿ ತುಮಕೂರಿನ ಜನತೆಗೆ ಕೃತಜ್ಞತೆ ಸಲ್ಲಿಸುವುದಾಗಿ" ತಿಳಿಸಿದರು.

ಈ ವೇಳೆ ನಿವೃತ್ತ ಪ್ರಾಂಶುಪಾಲರಾದ ವೆಂಕಟೇಶ್, ಮುಂಜಾನೆ ಗೆಳೆಯರ ಬಳಗದ ಮಧುಗೋಲ್ಡ್, ಮೇಜರ್ ನಾರಾಯಣಪ್ಪ, ನಟರಾಜು ಮತ್ತಿತರರು ಉಪಸ್ಥಿತರಿದ್ದರು.

ಆಟೋಯಡಿಯೂರಪ್ಪಗೆ ಅಭಿನಂದನೆ



ತುಮಕೂರು: ಮಾಜಿ ಮುಖ್ಯಮಂತ್ರಿ ಬಿ ಎಸ್‌ಯಡಿಯೂರಪ್ಪ ರವರ ಕಟ್ಟಾ ಬೆಂಬಲಿಗ ಕೆ.ಎಂ.ಶಿವಕುಮಾರ್ (ಆಟೋ ಯಡಿಯೂರಪ್ಪ) ಅವರ ಸಮಾಜ ಸೇವಾ ಕಾರ್ಯಗಳನ್ನು ಪ್ರಶಂಸಿಸಿ ಬಿಜೆಪಿ ರಾಜ್ಯಧ್ಯಕ್ಷ ಬಿ.ವೈ.ವಿಜಯೇಂದ್ರಅವರು ಅಭಿನಂದಿಸಿದರು.

ಕೆ.ಎಂ. ಶಿವಕುಮಾರ್ ಅವರುಪ್ರತಿ ವರ್ಷ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸೇರಿದಂತೆ ಹಲವಾರು ಸಾಮಾಜಿಕ ಕೆಲಸಗಳು ಮಾಡುತ್ತಾ ಬಂದಿದ್ದಾರೆ.ಕಳೆದ 15 ವರ್ಷಗಳಿಂದ ಬಿ.ಎಸ್.ಯಡಿಯೂರಪ್ಪ ರವರ ಹುಟ್ಟು ಹಬ್ಬವನ್ನು ಮೈದಾಳದ ಅನಾಥಾಶ್ರಮದಲ್ಲಿ ಆಯೋಜನೆ ಮಾಡುತ್ತಿದ್ದಾರೆ.

ಇತ್ತೀಚೆಗೆ ನಗರಕ್ಕೆ ಆಗಮಿಸಿದ್ದ ಬಿ.ವೈ. ವಿಜಯೇಂದ್ರ ಅವರು ಆಶ್ರಮಕ್ಕೆ ಭೇಟಿ ನೀಡಿ, ಆಟೋ ಯಡಿಯೂರಪ್ಪ ನವರ ಕೆಲಸಗಳನ್ನು ಶ್ಲಾಘಿಸಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ನಗರ ಶಾಸಕ ಜಿ.ಬಿ.ಜ್ಯೋತಿಗಣೇಶ್, ಗ್ರಾಮಾಂತರ ಶಾಸಕ ಬಿ.ಸುರೇಶ್‌ಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹೆಬ್ಬಾಕರವಿಶಂಕರ್,ರಾಜ್ಯ ಬಿಜೆಪಿ ಕಾರ್ಯದರ್ಶಿ ಅಂಬಿಕಾ ಹುಲಿ ನಾಯ್ಕರ್, ಮುಖಂಡ ಟಿ.ಆರ್.ಸದಾಶಿವಯ್ಯ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಸತ್ಯಮಂಗಲ ಜಗದೀಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಟಿ.ಹೆಚ್. ಹನುಮಂತರಾಜು ಮತ್ತಿತರರು ಹಾಜರಿದ್ದರು.

ವರದರಾಜ ಅಲೈಡ್ ಹೆಲ್ತ್ ಸೈನ್ಸ್ ವತಿಯಿಂದ ಒಂಬತ್ತು ದಿನಗಳ ಇಂಡಕ್ಷನ್ ಕಾರ್ಯಕ್ರಮ

ಆರೋಗ್ಯ ಸೇವಾ ಕ್ಷೇತ್ರಕ್ಕೆ ಹೊಸ ತಲೆಮಾರಿನ ವೃತ್ತಿಪರರ ಸಿದ್ಧತೆ : ಪ್ರೊ. ರಾಹುಲ್



ತುಮಕೂರು: ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ವೃತ್ತಿಪರ ಮಾರ್ಗದರ್ಶನ ಅಗತ್ಯವಾಗಿದೆ. ಅಲೈಡ್ ಹೆಲ್ತ್ ಸೈನ್ಸ್ ಕ್ಷೇತ್ರದಲ್ಲಿ ನಿರಂತರವಾಗಿ ಜ್ಞಾನವನ್ನು ವೃದ್ಧಿಸಿಕೊಳ್ಳುವ ಅಗತ್ಯ, ಪ್ರಾಯೋಗಿಕ ಕೌಶಲ್ಯಗಳ ಮಹತ್ವ, ಪ್ರಯೋಗಾಲಯ ಮತ್ತು ಆಸ್ಪತ್ರೆ ಆಧಾರಿತ ಸೇವೆಗಳಲ್ಲಿ ನಿಖರತೆ, ವೃತ್ತಿಪರ ನೈತಿಕತೆ ಹಾಗೂ ಆರೋಗ್ಯ ಸೇವೆಯಲ್ಲಿ ತಂಡದ ಸಹಕಾರದ ಮಹತ್ವದ ಎಂದು ಬೆಂಗಳೂರಿನ ಕಿಮ್ಸ್ ಅಲೈಡ್ಸ್ ಹೆಲ್ತ್ ಸೈನ್ಸ್ ಕಾಲೇಜಿನ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ರಾಹುಲ್ ರವರು ತಿಳಿಸಿದರು.

ನಗರದ ಶೆಟ್ಟಿಹಳ್ಳಿ ಹೊರವಲಯದ ಜಯನಗರ ದಕ್ಷಿಣದಲ್ಲಿರುವ ವರದರಾಜ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ವರದರಾಜ ಪ್ಯಾರಾಮೆಡಿಕಲ್ ಮತ್ತು ಬಿ.ಎಸ್ಸಿ. ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ವತಿಯಿಂದ "ಒಂಬತ್ತು ದಿನಗಳ ಸಮಗ್ರ ಇಂಡಕ್ಷನ್ ಕಾರ್ಯಕ್ರಮವು ಸಮಾರೋಪ" ಸಮಾರಂಭವನ್ನು ಅ.3 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರೊ.ರಾಹುಲ್‌ರವರು ಮಾತನಾಡುತ್ತಾ ಆರೋಗ್ಯ ಕ್ಷೇತ್ರದಲ್ಲಿ ಅಲೈಡ್ ಹೆಲ್ತ್ ಸೈನ್ಸಸ್ ವೃತ್ತಿಪರರ ಪಾತ್ರ ದಿನದಿಂದ ದಿನಕ್ಕೆ ಮಹತ್ವ ಪಡೆಯುತ್ತಿರುವ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದ ಆರಂಭದಲ್ಲಿಯೇ ಈ ಕ್ಷೇತ್ರದ ಸ್ವರೂಪ, ವೃತ್ತಿಪರ ಜವಾಬ್ದಾರಿಗಳು, ಆರೋಗ್ಯ ಸೇವಾ ವ್ಯವಸ್ಥೆ, ಶೈಕ್ಷಣಿಕ ಅವಕಾಶಗಳು ಹಾಗೂ ಭವಿಷ್ಯದ ವೃತ್ತಿ ಮಾರ್ಗಗಳ ಕುರಿತು ಸಮಗ್ರ ಅರಿವು ಹೊಂದುವುದು ಅಗತ್ಯವಾಗಿದೆ. ವಿವಿಧ ವೃತ್ತಿಪರ ವಿಭಾಗಗಳ ಕಾರ್ಯವೈಖರಿ, ಆಸ್ಪತ್ರೆ ಆಧಾರಿತ ಆರೋಗ್ಯ ಸೇವೆ, ತಂಡದ ಸಹಕಾರ, ವೃತ್ತಿಪರ ನೈತಿಕತೆ, ಸಂವಹನ ಕೌಶಲ್ಯ, ಶಿಸ್ತು ಹಾಗೂ ರೋಗಿಗಳೊಂದಿಗೆ ವೃತ್ತಿಪರವಾಗಿ ನಡೆದುಕೊಳ್ಳುವ ವಿಧಾನ ಸೇರಿದಂತೆ ವಿವಿಧ ವಿಷಯಗಳ ಕುರಿತು ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮದಲ್ಲಿ ವರದರಾಜ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವರುಣ್ ಅಸ್ಪಣ್ಣರವರು ಮಾತನಾಡುತ್ತಾ ಶಿಕ್ಷಣದ ಉದ್ದೇಶ ಕೇವಲ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸುವುದಲ್ಲ, ಗಳಿಸಿದ ಜ್ಞಾನವನ್ನು ಸಮಾಜದ ಒಳಿತಿಗಾಗಿ ಬಳಸುವ ಜವಾಬ್ದಾರಿಯುತ ವೃತ್ತಿಪರರನ್ನು ರೂಪಿಸುವುದಾಗಿದೆ. "ರಾಷ್ಟ್ರೀಯ ಸಹಾಯಕ ಮತ್ತು ಆರೋಗ್ಯ ಸೇವಾ ವೃತ್ತಿಗಳ ಆಯೋಗ" (ಎನ್.ಸಿ.ಎ.ಹೆಚ್.ಪಿ) ವಿದ್ಯಾರ್ಥಿಗಳಿಗೆ ವಿಶೇಷ ಅರಿವು ಮೂಡಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಅವಧಿಯಲ್ಲಿ ಶಿಸ್ತು, ಸಮಯಪಾಲನೆ, ನಿರಂತರ ಕಲಿಕೆ ಮತ್ತು ಉತ್ತಮ ವೃತ್ತಿಪರ ನಡವಳಿಕೆಯನ್ನು ರೂಢಿಸಿಕೊಳ್ಳಬೇಕು. ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬ ವೃತ್ತಿಪರನ ಮೇಲೂ ಸಮಾಜವು ಹೆಚ್ಚಿನ ನಂಬಿಕೆ ಇಟ್ಟಿರುವುದರಿಂದ, ಮಾನವೀಯ ಮೌಲ್ಯಗಳೊಂದಿಗೆ ತಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ವರದರಾಜ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಡಾ.ಮುಬಾರಕ್‌ರವರು ಮಾತನಾಡುತ್ತಾ ಅಲೈಡ್ ಹೆಲ್ತ್ ಸೈನ್ಸ್ ಕ್ಷೇತ್ರವು ಆರೋಗ್ಯ ಸೇವಾ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದು, ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿ ಪ್ರಾಯೋಗಿಕ ಹಾಗೂ ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಹೊಸ ತಂತ್ರಜ್ಞಾನಗಳು ಮತ್ತು ಆರೋಗ್ಯ ಕ್ಷೇತ್ರದಲ್ಲಿನ ಬದಲಾವಣೆಗಳಿಗೆ ಹೊಂದಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಪದವಿ ಶಿಕ್ಷಣದ ಅವಧಿಯಲ್ಲಿ ಕಲಿಕೆಯ ಜೊತೆಗೆ ಸಂಶೋಧನೆ, ಪ್ರಾಯೋಗಿಕ ತರಬೇತಿ ಮತ್ತು ವೃತ್ತಿಪರ ಬೆಳವಣಿಗೆಗೆ ಆದ್ಯತೆ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವರದರಾಜ ಪ್ಯಾರಾಮೆಡಿಕಲ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಮೊಹಬೂಬ್ ಅಲೀರವರು ಮಾತನಾಡುತ್ತಾ ನೂತನ ವಿದ್ಯಾರ್ಥಿಗಳು ಸಂಸ್ಥೆಯ ಶೈಕ್ಷಣಿಕ ವಾತಾವರಣ, ಅಲೈಡ್ ಹೆಲ್ತ್ ಸೈನ್ಸಸ್‌ನ ವೃತ್ತಿಪರ ವ್ಯಾಪ್ತಿ ಮತ್ತು ತಮ್ಮ ಮುಂದಿರುವ ಅವಕಾಶಗಳನ್ನು ಆರಂಭದಲ್ಲಿಯೇ ಅರ್ಥಮಾಡಿಕೊಳ್ಳುವುದು ಇಂಡಕ್ಷನ್ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದರು. ವರದರಾಜ ಸಂಸ್ಥೆಯ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಫೋಟೋ ಕ್ಯಾಪ್ಷನ್:

ನಗರದ ಶೆಟ್ಟಿಹಳ್ಳಿ ಹೊರವಲಯದ ಜಯನಗರ ದಕ್ಷಿಣದಲ್ಲಿರುವ ವರದರಾಜ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ವರದರಾಜ ಪ್ಯಾರಾಮೆಡಿಕಲ್ ಮತ್ತು ಬಿ.ಎಸ್ಸಿ. ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ವತಿಯಿಂದ "ಒಂಬತ್ತು ದಿನಗಳ ಸಮಗ್ರ ಇಂಡಕ್ಷನ್ ಕಾರ್ಯಕ್ರಮವು ಸಮಾರೋಪ" ಸಮಾರಂಭವನ್ನು ಅ.3 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಕಿಮ್ಸ್ ಅಲೈಡ್ಸ್ ಹೆಲ್ತ್ ಸೈನ್ಸ್ ಕಾಲೇಜಿನ ಪೆಥಾಲಜಿ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ರಾಹುಲ್, ವರದರಾಜ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವರುಣ್ ಅಸ್ಪಣ್ಣ, ವರದರಾಜ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಡಾ.ಮುಬಾರಕ್, ವರದರಾಜ ಪ್ಯಾರಾಮೆಡಿಕಲ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮೊಹಬೂಬ್ ಅಲೀ, ಹಾಗೂ ವರದರಾಜ ಸಂಸ್ಥೆಯ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಭಿವೃದ್ಧಿ ಕಾಣದ ಚಿಕ್ಕಲ್ಲೂರು ತೆಳ್ಳನೂರು ಮಾರ್ಗ ರಸ್ತೆ

ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರು ಪವಾಡ ಪುರುಷ ಸಿದ್ದಪ್ಪಾಜಿ ನೆಲೆಸಿರುವ ಪುಣ್ಯ ಕ್ಷೇತ್ರಜಿಲ್ಲೆಯಲ್ಲಿರುವ ಒಂದು ಪವಿತ್ರ ಪುಣ್ಯ ಕ್ಷೇತ್ರವಾಗಿದ್ದು ದಿನನಿತ್ಯ ನೂರಾರು ಭಕ್ತರು ಶ್ರೀ ಮಠಕ್ಕೆ ಭೇಟಿ ನೀಡುತ್ತಾರೆ, ಚಿಕ್ಕಲ್ಲೂರು ಕ್ಷೇತ್ರ ಕೊಳ್ಳೇಗಾಲ ತಾಲ್ಲೂಕಿನ ತೆಳ್ಳನೂರು ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಹನೂರು ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟಿದೆ, ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಚಿಕ್ಕಲ್ಲೂರು ಕ್ಷೇತ್ರಕ್ಕೆ ಬರಲು ಎರಡು ಮಾರ್ಗಗಲಿವೆ ಒಂದು ಕೊಳ್ಳೇಗಾಲ ದೊಡ್ಡಿಂದುವಾಡಿ ಹಾಗೂ ಪಾಳ್ಯ ಮಾರ್ಗ, ಇನ್ನೊಂದು ಹನೂರು ಬಂಡಳ್ಳಿ, ತೆಳ್ಳನೂರು ಮಾರ್ಗ,ಎ ಎರಡು ಮಾರ್ಗಗಳಲ್ಲಿ ಸ್ವರಾಜ್ಯದಿಂದ ಅಲ್ಲದೆ ಹೊರ ರಾಜ್ಯಗಳಿಂದಲೂ ಕೂಡ ಸಾವಿರಾರು ಭಕ್ತರು ಸಿದ್ದಪ್ಪಾಜಿ ಕ್ಷೇತ್ರ ಚಿಕ್ಕಲ್ಲೂರಿಗೆ ಬರುತ್ತಾರೆ, ಆದರೆ ಬರುವ ಭಕ್ತರಿಗೆ ಸುಸಜ್ಜಿತವಾದ ಉತ್ತಮ ರಸ್ತೆ ಇಲ್ಲದೆ ಕಲ್ಲು ಮಣ್ಣು ಹಳ್ಳಗುಂಡಿಗಳ ರಸ್ತೆಯಲ್ಲಿ ವಾಹನ ಸವಾರರು ಜೀವ ಕೈಯಲ್ಲಿಡಿದುಕೊಂಡು ಬಿದ್ದು ಕೆಡೆದು ಸಂಚರಿಸುವ ದುಸ್ಥಿತಿ ಈ ಮಾರ್ಗದ ರಸ್ತೆಯಲ್ಲಿ ನಿರ್ಮಾಣವಾಗಿದೆ, ದೊಡ್ಡ ಹಳ್ಳಗುಂಡಿಗಳುನೋಡಿದರೆ ಮರಣಕ್ಕೆ ಬಾಯಿ ತೆರೆದು ನಿಂತ ಯಮ ಸ್ವರೂಪಿಯಂತಿವೆ, ಕೊಳ್ಳೇಗಾಲದಿಂದ ದೊಡ್ಡಂದುವಾಡಿ ಮಾರ್ಗ ಚಿಕ್ಕಲ್ಲೂರಿಗೆ ಬರುವ ರಸ್ತೆ ಈಗಾಗಲೇ ರಸ್ತೆ ಕಾಮಗಾರಿ ಪ್ರಾರಂಭವಹಿಸಿ ವರ್ಷಗಳೇ ಕಳೆದರು ಇನ್ನು ಕೂಡ ಕಾಮಗಾರಿ ಆಮೇಗತಿಯಲ್ಲಿ ಸಾಗುತ್ತಿದೆ, ಆದರೆ ಹನೂರು ಬಂಡಳ್ಳಿ ತೆಳ್ಳನೂರು ಮಾರ್ಗ ಚಿಕ್ಕಲ್ಲೂರಿಗೆ ಬರುವ ರಸ್ತೆ ಹನೂರಿನಿಂದ ಬಂಡಳ್ಳಿವರೆಗೆ ಕಾಮಗಾರಿ ನಡೆಯುತ್ತಿದೆ, ಆದರೆ ತೆಳ್ಳನೂರಿಂದ ಚಿಕ್ಕಲ್ಲೂರುವರೆಗಿನ ರಸ್ತೆ ತೀರ ಹದಗೆಟ್ಟಿದೆ ಪ್ರತಿ ವರ್ಷ ಮಳೆ ಬಿದ್ದಾಗ ಹಳ್ಳಗಳು ತುಂಬಿ ಹರಿದು ರಸ್ತೆ ಪೂರಾ ಹಾಳಾಗಿದೆ , ದ್ವಿ ಚಕ್ರ ವಾಹನಗಳು ಇರಲಿ ದೊಡ್ಡ ದೊಡ್ಡ ವಾಹನಗಳು ಈ ರಸ್ತೆಯಲ್ಲಿ ಸುಚರಿಸಲು ಪರಿಪಾಡು ಪಡುತ್ತಿದ್ದಾರೆ, ಪುಣ್ಯ ಕ್ಷೇತ್ರ ದರ್ಶನಕ್ಕೆಂದು ಈ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಹದಗೆಟ್ಟಿ ರಸ್ತೆಯನ್ನು ಕಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಶಾಸಕರಿಗೆ ಇಡೀ ಶಾಪ ಹಾಕುತ್ತಿದ್ದಾರೆ,ಲೋಕೋಪಯೋಗಿ ಇಲಾಖೆಯಲ್ಲಿ ಹಿಂದೆ ಇದ್ದ ಪುರುಷೋತ್ತಮ್ ಹಾಗೂ ಇಂಜಿನಿಯರ್ ಸುರೇಂದ್ರರವರುಗಳಿಗೂ ಚಿಕ್ಕಲ್ಲೂರು ತೆಳ್ಳನೂರು ಮಾರ್ಗ ರಸ್ತೆ ಕಾಮಗಾರಿ ಪ್ರಾರಂಭದ ಬಗ್ಗೆ ಗ್ರಾಮದವರು ಮನವಿ ಮಾಡಿದ್ದರು, ಈಗ ಲೋಕೋಪಯೋಗಿ ಇಲಾಖೆಗೆ ಹೊಸ ಅಧಿಕಾರಿಗಳು ಬಂದಿದ್ದಾರೆ ಅವರಿಗೂ ಈ ಮಾರ್ಗದ ರಸ್ತೆ ಬಗ್ಗೆ ತಿಳಿದಿರುತ್ತದೆ ಆದರೂ ಕೂಡ ಚಿಕ್ಕಲ್ಲೂರು ತೆಳ್ಳನೂರು ಮಾರ್ಗ ರಸ್ತೆ ಕಾಮಗಾರಿ ಬಗ್ಗೆ ಗಮನ ಹರಿಸದೆ ಇರುವುದು ಖಂಡನೀಯ, ಕಳೆದ ಅವಧಿಯಲ್ಲಿ ಶಾಸಕರಾಗಿದ್ದ ಆರ್. ನರೇಂದ್ರರವರು ತೀರ ಹದಗೆಟ್ಟಿದ್ದ ತೆಳ್ಳನೂರು ಬಂಡಳ್ಳಿ ವರೆಗಿನ ರಸ್ತೆ ಕಾಮಗಾರಿಯನ್ನು ಮಾಡಿಸಿದ್ದರು, ಆದರೆ ತೆಳ್ಳನೂರಿನಿಂದ ಚಿಕ್ಕಲೂರುವರೆಗಿನ ರಸ್ತೆ ಹೇಳಿಕೊಳ್ಳುವುದಕ್ಕೂ ಅಸಹ್ಯವಾಗುವಷ್ಟು ಹದಗೆಟ್ಟು ಹೋಗಿದೆ ಹಾಗೂ ಸ್ಥಳೀಯರು ಮನೆಗಳ ಮುಂದೆ ಹಾಗು ಜಮೀನುಗಳ ಪಕ್ಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದು ರಸ್ತೆ ತುಂಬಾ ಕಿರಿದಾಗಿದ್ದು ಈ ರಸ್ತೆಯಲ್ಲಿ ವಾಹನಗಳು ಸಂಚಾರಿಸುವುದು ದುಸ್ತರವಾಗಿದೆ

ಕೂಡಲೇ ಸಂಬಂಧ ಪಟ್ಟ ಹನೂರು ಶಾಸಕರು ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಗಮನ ಹರಿಸಿ ತೆಳ್ಳನೂರು

ದಲಿತರ ಮೇಲೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಿಂದ ದುರ್ವತನೆ; ಡಿ,ಎಸ್,ಎಸ್, ಆರೋಪ



ಚಿಕ್ಕನಾಯಕನಹಳ್ಳಿ; ದಲಿತರ ಮೇಲೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಸಿ.ಡಿ.ಚಂದ್ರಶೇಖರ್ ರವರ ದುರ್ವತನೆ ಹೆಚ್ಚಾಗಿದೆ. ಆಗ್ನೇಯ ಪದವೀಧರರ ಕ್ಷೇತ್ರದ ಪಕ್ಷದ ಅಭ್ಯರ್ಥಿಯನ್ನ ಸೋಲಿಸುವ ನಿಟ್ಟಿನಲ್ಲಿ ಅವರ ನಡೆಯಾಗಿದೆ. ಇವರನ್ನ ಕೂಡಲೆ ಪಕ್ಷದಿಂದ ಉಚ್ಚಾಟಣೆ ಮಾಡಬೇಕೆಂದು ರಾಜ್ಯ ಮಾದಿಗ ದಂಡೋರ ಕಾರ್ಯದರ್ಶಿ ಬೇವಿನಹಳ್ಳಿ ಚನ್ನಬಸವಯ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದರು. ಪಟ್ಟಣದ ಖಾಸಗಿ ಸ್ಥಳದಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿ ಆಗ್ನೇಯ ಪದವೀಧರರ ಕ್ಷೇತ್ರದ ಅಭ್ಯರ್ಥಿ ಶಶಿ ಹುಲಿಕುಂಟೆ ಮಠ್ ರವರು ನಾಮಪತ್ರ ಸಲ್ಲಿಕೆ ದಿನ ನಾವು ಬೆಂಬಲಿಸಿ ಬೆಂಗಳೂರಿಗೆ ಹೋಗಿಬಂದಿದ್ದಕ್ಕೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಸಿ.ಡಿ.ಚಂದ್ರಶೇಖರ್ ನಮ್ಮ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ತಾಲ್ಲೂಕಿನ ಎಲ್ಲಾ ಕಾಲೋನಿಯ ಹರಿಜನ ಗಿರಿಜನರು ಪಕ್ಷಕ್ಕೆ ಬೆಂಬಲಿಸಿ ಮತಗಳನ್ನ ನೀಡುತ್ತಾ ಬಂದಿದ್ದಾರೆ. ದಲಿತ ಕಾರ್ಯಕರ್ತರ ಮೇಲೆ ಪದೇ ಪದೇ ಅವಾಚ್ಯ ಶಬ್ದ ಪ್ರಯೋಗದಿಂದ ಜನ ಮನನೊಂದಿದ್ದಾರೆ.ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಹಾಗೂ ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷಸ್ಥಾನ ಹೊಂದಿರುವ ಅವರು ಶಶಿ ಹಹುಲಿಕುಂಟೆ ಸೋಲಿಸುವ ಉದ್ದೇಶದಿಂದ ತಾಲ್ಲೂಕಿನ ಶಿಕ್ಷರ ಮೇಲೂ ಪರಿಣಾಮ ಬೀರುವಂತಹ ಮಾತುಗಳನ್ನಾಡುತ್ತಿದ್ದಾರೆ.ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಕೆ..ಎಸ್.ಕಿರಣ್ ಕುಮಾರ್ ರವರನ್ನ ಶಾಸಕರನ್ನಾಗಿ ಮಾಡಲು ಇವರೇ ಮಾರಕರಾಗುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಪಂಚಗ್ಯಾರಂಟಿ ಯೋಜನೆ ನೀಡುತ್ತಿರುವ ಕಾಂಗ್ರೇಸ್ ಸರ್ಕಾರ ಅಧಿಕಾರ ಚುಕ್ಕಾಣಿ ಹಿಡಿಯಲು ಹರಿಜನ ಗಿರಿಜನರು ಸಾಕ್ಷಿಯಾಗಿದ್ದಾರೆ. ರಾಜ್ಯದ ಸಿ.ಎಂ ಡಿ.ಕೆ.ಶಿರವರು ಹಾಗೂ ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ರವರು ಸಿಡಿಸಿರವರಿಗೆ ಪಕ್ಷ ನೀಡಿರುವ ಸ್ಥಾನಗಳನ್ನ ವಜಗೊಳಿಸುವಂತೆ ಒತ್ತಾಯಿಸಿದರು. ಪಕ್ಷದ ಎಸ್.ಸಿ.ಘಟಕದ ತಾಲ್ಲೂಕು ಅಧ್ಯಕ್ಷ ಅಗಸರಹಳ್ಳಿ ನರಸಿಂಹಮೂರ್ತಿ ಮಾತನಾಡಿ ನಾವು 2008ರಿಂದ ಪಕ್ಷದಲ್ಲಿ ನಿಷ್ಠೆಯಿಂದ ಕೆಲಸಮಾಡುತ್ತಿದ್ದೇವೆ. ಎಸ್.ಸಿ. ಎಸ್.ಟಿ. ಅಲ್ಪಸಂಖ್ಯಾತರು ಹಿಂದುಳಿದ ವರ್ಗಗಳು ಕಾಂಗ್ರೆಸ್ ಪಕ್ಷಕೆ ಹೆಚ್ಚಿನ ಸಂಖ್ಯೆಯಲ್ಲಿ ಮತಗಳನ್ನ ನೀಡುತ್ತಿದ್ದಾರೆ. ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾಗಿರುವ ಸಿಡಿಸಿ ರವರು ದಲಿತರನ್ನೇ ಹೆಚ್ಚು ಗುರಿಯನ್ನಾಗಿಸಿ ದುರುದ್ದೇಶದಿಂದ ವರ್ತಿಸುತ್ತಿರುವುದನ್ನ ತೀವ್ರವಾಗಿ ಖಂಡಿಸುತ್ತೇವೆ. ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾಗಿರುವ ಅವರ ಭೂತ್ ಪರಿಶೀಲಿಸಿದಾಗ ಕೇವಲ 46ಮತಗಳು ಬಿದ್ದಿವೆ.ನಮ್ಮ ಕಾಲೋನಿ ಭೂತ್ ಗಳ್ಳನ್ನು ನೋಡಿ ಎಷ್ಟು ಮತಗಳು ಪಕ್ಷಕ್ಕೆ ಬಂದಿವೆ ಎನ್ನುವುದು ತಿಳುಯುತ್ತದೆ ತಮ್ಮ ಮಾತುಗಳಲ್ಲಿ ಛೇಡಿಸಿದರು. ನಾವು ನಿಷ್ಠಾವಂತರಾಗಿ ಕೆಲಸಮಾಡಿ ಕಾಂಗ್ರೆಸ್ ಪಕ್ಷಕ್ಕೆ ದುಡಿಯುತ್ತಿದ್ದೇವೆ. ಸಿಡಿಸಿ ಬಿಜೆಪಿ ಜೆಡಿಎಸ್ ನಿಂದ ಬಂದಿದ್ದಾರೆ. ಚುನಾವಣೆಗಳಲ್ಲಿ ಹಿಂಬದಿಯಿಂದ ಜೆಡಿಎಸ್ ಗೆ ಕೆಲಸಮಾಡುತ್ತಾರೆ ನಮಗೆ ತಿಳಿದಿದೆ. ಮುಂದೆ ಜಿಲ್ಲಾ ಹಾಗೂ ತಾಲ್ಲೂಕು ಪಚಾಯತ್ ಚುನಾವಣೆ ಬರತ್ತಿವೆ. ಪಕ್ಷದ ಗೆಲುವಿಗೆ ದಕ್ಕೆ ಉಂಟುಮಾಡುವ ಹಾಗೂ ಪಕ್ಷಕ್ಕೆ ದ್ರೋಹ ಬಗೆಯುವ ಇವರಮೇಲೆ ಪಕ್ಷ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದರು ಇಲ್ಲವಾದರೆ ನಾವುಗಳು ಸಾಮೂಹಿಕವಾಗಿ ಪಕ್ಷಕ್ಕೆ ರಾಜನಾಮೆ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದರು.ಪಕ್ಷದ ಕಾರ್ಮಿಕ ಘಟಕದ ತಾಲ್ಲೂಕು ಅಧ್ಯಕ್ಷ ಸುರೇಶ್(ಡಾಬ) ಮಾತನಾಡಿ ಪಂಚಗ್ಯಾರಂಟಿ ಯೋಜನೆ ತಾಲ್ಲೂಕು ಅಧ್ಯಕ್ಷಸ್ಥಾನ ನೀಡಿ ಸಭೆಗಳಲ್ಲಿ ಶಾಸಕರ ಪಕ್ಕದಲ್ಲಿ ಕೂರುವಂತಹ ಅವಕಾಶ ಹಾಗೂ ಪ್ರತೀ ತಿಂಗಳು 25ಸಾವಿರ ಗೌರವ ಧನವನ್ನ ಸರ್ಕಾರ ನೀಡುತ್ತಿದೆ. ಪಕ್ಷ ಸಂಘಟನೆಗೆ ಯಾವುದೇ ರೀತಿಯಲ್ಲಿ ಹಣ ಖರ್ಚುಮಾಡೀವುದಿಲ್ಲಾ. ಬರೀ ದಲಿತರನ್ನ ಅವ್ಯಾಚ ಶಬ್ದಗಳಿಂದ ಪದಪ್ರಯೋಗ ಮಾಡುವ ಇವರು ನನ್ನ ಮೇಲೂ ಪ್ರಯೋಗಿಸಿದ್ದಾರೆ. ಪಕ್ಷದ ದೊಡ್ಡವರು ಮದ್ಯಸ್ಥಿಕೆಯಲ್ಲಿ ಕ್ಷಮೇ ಕೇಳುವ ಚಾಳಿಯು ಇವರದ್ದಾಗಿದೆ. ದಲಿತರಾದ ನಾವು ಅವ್ಯಾಚ ಶಬ್ದಗಳಿಂದ ಬಯ್ಯುವುದನ್ನ ಸಹಿಸಿಕೊಳ್ಳುವುದೀಲ್ಲಾ ಪಕ್ಷದಲ್ಲಿ ನಾವಿರಬೇಕು ಇಲ್ಲಾ ಅವರಿರ ಬೇಕು ಎಂದು ರೋಷದ

ಪ್ರತಿಯೊಬ್ಬ ಮಕ್ಕಳಿಗೂ ಪೌಷ್ಠಿಕ ಆಹಾರ ನೀಡುವ ಮೂಲಕ ಉತ್ತಮ ಆರೋಗ್ಯ ಕಾಪಾಡಬೇಕು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು– ಪ್ರತಿಯೊಬ್ಬ ಮಕ್ಕಳಿಗೂ ಪೌಷ್ಠಿಕ ಆಹಾರ ನೀಡುವ ಮೂಲಕ ಉತ್ತಮ ಆರೋಗ್ಯ ಕಾಪಾಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಡಾ. ಸಿದ್ದರಾಮಯ್ಯ ತಿಳಿಸಿದರು.

ತಾಲ್ಲೂಕಿನ ಹೆಬ್ಬಾಕ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಏರ್ಪಡಿಸಿದ್ದ ಪೋಷಣ್ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಪೋಷಕರು ಮತ್ತು ಮಕ್ಕಳು ಜಂಕ್ ಫುಡ್‌ಗಳಿಗೆ ಮಾರು ಹೋಗುತ್ತಿದ್ದಾರೆ. ಇದು ಆರೋಗ್ಯಕ್ಕೆ ಹಾನಿಕಾರಕ. ಯಾವುದೇ ಕಾರಣ ಜಂಕ್ ಫುಡ್‌ಗಳನ್ನು ಸೇವಿಸಬಾರದು. ಬದಲಾಗಿ ಈ ಜಂಕ್‌ಫುಡ್‌ನ್ನು ತ್ಯಜಿಸಿ ಪೌಷ್ಠಿಕ ಆಹಾರ ಸೇವನೆಗೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಪ್ರತಿ ಮನೆಯಲ್ಲೇ ಇರುವ ಬೆಲ್ಲ, ಕಡಲೆಬೀಜ, ಹೆಸರುಕಾಳುಗಳನ್ನು ಸೇವಿಸಿದರೆ ಮಕ್ಕಳಲ್ಲಿ ಪೌಷ್ಠಿಕತೆ ಬರುತ್ತದೆ. ಇದರೊಂದಿಗೆ ನವಣೆ, ಅರ್ಕ ಸೇರಿದಂತೆ ಸಿರಿಧಾನ್ಯಗಳನ್ನು ಆಹಾರದಲ್ಲಿ ಬಳಸುವಂತೆಯೂ ಅವರು ತಿಳಿಸಿದರು.

ಈ ಹಿಂದೆ ಸಿರಿಧಾನ್ಯಗಳು ಬಡವರ ಆಹಾರವಾಗಿದ್ದವು. ಆದರೆ ಈಗ ಶ್ರೀಮಂತರ ಆಹಾರ ಧಾನ್ಯಗಳಾಗಿ ಮಾರ್ಪಟ್ಟಿವೆ. ಇದರ ಬೆಲೆ ದುಬಾರಿಯಾಗಿದೆ ಎಂದರು.

ನಮ್ಮ ಜೀವನದಲ್ಲಿ ಕೆಟ್ಟ ಅಭ್ಯಾಸಗಳನ್ನು ಬೆಳೆಸಿಕೊಳ್ಳಬಾರದು. ಇದೇ ಆರೋಗ್ಯಕ್ಕೆ ಹಾನಿಕಾರಕ. ಇದರಿಂದ ಒಂದು ಬಾರಿ ಆರೋಗ್ಯ ಹದಗೆಟ್ಟರೆ ಸರಿಪಡಿಸುವುದು ಇಂದು ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಯಾರೂ ಸಹ ದುರಭ್ಯಾಸಗಳಿಗೆ ಮಾರು ಹೋಗಬಾರದು ಎಂದರು.

ಕೋಟಿ ದುಡ್ಡಿರುವವರೆಲ್ಲಾ ಶ್ರೀಮಂತರಲ್ಲ, ಉತ್ತಮ ಆರೋಗ್ಯವಂತರೇ ನಿಜವಾದ ಶ್ರೀಮಂತರು. ಇದನ್ನು ಅರಿತು ಪ್ರತಿಯೊಬ್ಬರೂ ಸಹ ಆರೋಗ್ಯದ ಕಡೆಗೆ ಗಮನ ಹರಿಸಬೇಕು ಎಂದು ಹೇಳಿದರು.

ಹೆಣ್ಣು ಮಕ್ಕಳು ಆರೋಗ್ಯವಾಗಿದ್ದರೆ ಆ ಕುಟುಂಬ ಚೆನ್ನಾಗಿರುತ್ತದೆ. ಹಾಗಾಗಿ ಮಹಿಳೆಯರು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ರುಚಿ, ಶುಚಿಯಾದ ಪೌಷ್ಠಿಕ ಆಹಾರ ಸೇವಿಸುವುದರೊಂದಿಗೆ ತಮ್ಮ ಆರೋಗ್ಯ, ಮಕ್ಕಳ ಆರೋಗ್ಯ ಹಾಗೂ ಇಡೀ ಕುಟುಂಬದ ಆರೋಗ್ಯವನ್ನು ಕಾಪಾಡಬೇಕು ಎಂದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪವಿತ್ರ ಮಾತನಾಡಿ, ಹೆಣ್ಣು ಮಕ್ಕಳಿಗೆ 18 ವರ್ಷದೊಳಗೆ ಮದುವೆ ಮಾಡಲು ಪ್ರಯತ್ನ ಪಟ್ಟರೆ ಅದು ಕಾನೂನು ಪ್ರಕಾರ ಅಪರಾಧ. ಅಂತಹವರಿಗೆ ಜಾಮೀನು ಸಹ ಸಿಗುವುದಿಲ್ಲ. ಆದ್ದರಿಂದ ಯಾರೂ ಸಹ ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸಬಾರದು. ಇಂತಹ ಘಟನೆಗಳು ಯಾರ ಗಮನಕ್ಕೆ ಬಂದರೂ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು ಎಂದು ಹೇಳಿದರು.

ಮಕ್ಕಳಿಗೆ ಯಾವುದೇ ರೀತಿಯ ಸಮಸ್ಯೆ ಎದುರಾದರೆ 1098ಗೆ ಕರೆ ಮಾಡಿ ತಿಳಿಸಬೇಕು. ಹಾಗೆಯೇ ಮಹಿಳೆಯರಿಗೆ ಸಮಸ್ಯೆ ಕಂಡು ಬಂದರೆ 181 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಮನೆಗಳಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ ಪ್ರತಿಯೊಬ್ಬರು ಹೆಚ್ಚು ಹೆಚ್ಚು ಹಣ್ಣು, ಸೊಪ್ಪು, ತರಕಾರಿಯನ್ನು ಸೇವಿಸಬೇಕು. ಗ್ರಾಮದಲ್ಲಿ ಸಿಗುವ ನುಗ್ಗೆ ಸೊಪ್ಪು ವಾರದಲ್ಲಿ 2 ಬಾರಿ ಬಳಸಬೇಕು. ಇದರಿಂದ ಪೌಷ್ಠಿಕಾಂಶ ಹೆಚ್ಚುತ್ತದೆ ಎಂದರು.

ಗರ್ಭಿಣಿಯರು ಹಾಗೂ ಬಾಣಂತಿಯರು ಮೊಟ್ಟೆ ಸೇವಿಸಬಾರದು ಎನ್ನುವುದು ತಪ್ಪು ಕಲ್ಪನೆ. ಪ್ರತಿದಿನ ಗರ್ಭಿಣಿಯರು ಮತ್ತು ಬಾಣಂತಿಯರು ಮೊಟ್ಟೆ ಸೇವಿಸಿದರೆ ಸಮತೋಲಿತ ಆಹಾರ ಸೇವನೆ ಮಾಡಿದಂತಾಗುತ್ತದೆ. ಇದರಿಂದ ಪೌಷ್ಠಿಕಾಂಶ ದೊರೆಯುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಅನುಷಾ, ಕೋರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಇಂದು, ಹಿರಿಯ ಪತ್ರಕರ್ತ ಹೆಚ್.ಎನ್. ಮಲ್ಲೇಶ್, ಹೆಬ್ಬಾಕ ಸಿಹೆಪ್ರಿಯ, ಅಂಗನವಾಡಿ ಕಾರ್ಯಕರ್ತೆಯರಾದ ಲೀಲಾವತಿ, ಕಮಲಮ್ಮ, ಗೀತಾ, ಜಯಲಕ್ಷ್ಮಮ್ಮ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಕರಾಟೆಯಲ್ಲಿ ರಾಮನಗರ ವಿದ್ಯಾರ್ಥಿನಿಗೆ ಚಿನ್ನದ ಪದಕ



ರಾಮನಗರ: ಮುಂಬೈನಲ್ಲಿ ನಡೆದ ಅಂತಾರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ರಾಮನಗರದ ವಿದ್ಯಾರ್ಥಿನಿ ರಿಷಿಕಾ ಚಿನ್ನದ ಪದಕ ಗೆದ್ದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.ನಗರದ ಅಗ್ರಹಾರ ಬಡಾವಣೆಯ ಶ್ರೀಧರ್‌‌ಶಿಲ್ಪ ದಂಪತಿಯ ಪುತ್ರಿ ರಿಷಿಕಾ (14) ಚಿನ್ನದ ಪದಕ ಗೆದ್ದ ಸಾಧಕಿ. ನಗರದ ಯುನಿವರ್ಸಲ್ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಿಷಿಕಾ, ಬಾಲ್ಯದಿಂದಲೇ ಕರಾಟೆಯಲ್ಲಿ ಆಸಕ್ತಿ ಬೆಳೆಸಿಕೊಂಡು ತರಬೇತಿ ಪಡೆಯುತ್ತಿದ್ದಾರೆ. ಕರಾಟೆ ತರಬೇತುದಾರ ಮಹೇಶ್ ಅವರ ಮಾರ್ಗದರ್ಶನದಲ್ಲಿ ಸತತ ಅಭ್ಯಾಸ ನಡೆಸುತ್ತಿರುವ ರಿಷಿಕಾ, ಮುಂಬೈನಲ್ಲಿ ನಡೆದ ಅಂತಾರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಈ ಸಾಧನೆಯ ಬೆನ್ನಲ್ಲೇ ನೇಪಾಳದಲ್ಲಿ ನಡೆಯಲಿರುವ ಏಷ್ಯನ್ ಕರಾಟೆ ಫೆಡರೇಷನ್ ಆಯೋಜಿಸುವ ಅಂತಾರಾಷ್ಟ್ರೀಯ ಪಂದ್ಯಾವಳಿಗೆ ರಿಷಿಕಾ ಆಯ್ಕೆಯಾಗಿದ್ದಾರೆ. ಮುಂದಿನ ಸ್ಪರ್ಧೆಯಲ್ಲೂ ಉತ್ತಮ ಪ್ರದರ್ಶನ ನೀಡಿ ದೇಶಕ್ಕೆ ಕೀರ್ತಿ ತರುವ ವಿಶ್ವಾಸವನ್ನು ಕುಟುಂಬಸ್ಥರು ಹಾಗೂ ತರಬೇತುದಾರರು ವ್ಯಕ್ತಪಡಿಸಿದ್ದಾರೆ.

ಟೇಕ್ವೊಂಡೋ ಸ್ಪರ್ಧೆಯಲ್ಲಿ ಪೂರ್ವಿಕಗೆ ಚಿನ್ನದ ಪದಕ



ರಾಮನಗರ: ಶರತ್ ಮೆಮೋರಿಯಲ್ ಶಾಲೆಯ ವಿದ್ಯಾರ್ಥಿನಿ ಪೂರ್ವಿಕ.ಎಮ್ ಪಂಜಾಬ್ ನ ಅಮೃತಸರದಲ್ಲಿ ನಡೆದ ಸಿ ಐ ಎಸ್ ಸಿ ಇ ನ್ಯಾಶನಲ್ ಟೇಕ್ವೊಂಡೋ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ನಗರದ ಮಾಗಡಿ ರಸ್ತೆಯಲ್ಲಿನ ಕೆಂಪೇಗೌಡ ಸರ್ಕಲ್ ಬಳಿಯ ಶರತ್ ಮೆಮೋರಿಯಲ್ ಶಾಲೆಯ 10ನೇ ತರಗತಿಯಲ್ಲಿ ಪೂರ್ವಿಕ.ಎಮ್ ವ್ಯಾಸಂಗ ಮಾಡುತ್ತಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿನಿಗೆ ಶರತ್ ಮೆಮೋರಿಯಲ್ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಆದಿನಾರಯಣ ರೆಡ್ಡಿ, ಕಾರ್ಯದರ್ಶಿ ರಾಜೇಶ್ವರಿ ಎನ್., ಪ್ರಾಂಶುಪಾಲರಾದ ರೂಪಾದೇವಿ ಕೆ.ಎಸ್., ಹಾಗೂ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

ಶಿಕ್ಷಕರು ಶಿಕ್ಷಣಕ್ಕೆ ಒತ್ತು ಕೊಟ್ಟು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶ್ರಮಿಸಿದ್ದಾರೆ.



ರಾಮನಗರ : ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಆವರಣದಲ್ಲಿ ಸೋಮವಾರ ಕ್ಷೇತ್ರ ಸಮನ್ವಯಾಧಿಕಾರಿ ಮತ್ತು ಶಿಕ್ಷಣ ಸಂಯೋಜಕರು, ಸಮೂಹ ಸಂಪನ್ಮೂಲ ವ್ಯಕ್ತಿಗಳಾಗಿ ಐದು ವರ್ಷಗಳ ಕಾಲ ತಾಲ್ಲೂಕಿನ ವಿವಿದ ವೃತ್ತಗಳಲ್ಲಿ ಕರ್ತವ್ಯ ನಿರ್ವಹಿಸಿ ಮತ್ತೆ ಶಾಲೆಗಳಿಗೆ ವರ್ಗಾವಣೆಗೊಂಡ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕ್ಷೇತ್ರ ಸಮನ್ವಯಾಧಿಕಾರಿ ಕಛೇರಿಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ ಮಾತನಾಡಿ ರಾಮನಗರ ತಾಲ್ಲೂಕಿನ ವಿವಿಧ ವೃತ್ತಗಳಲ್ಲಿ ಹಲವು ಶಿಕ್ಷಕರುಗಳು ಶಿಕ್ಷಣ ಇಲಾಖೆ ಆದೇಶದಂತೆ ಕಳೆದ ಐದು ವರ್ಷಗಳ ಹಿಂದೆ ಕ್ಷೇತ್ರ ಸಮನ್ವಯಾಧಿಕಾರಿ ಮತ್ತು ಶಿಕ್ಷಣ ಸಂಯೋಜಕರು, ಸಮೂಹ ಸಂಪನ್ಮೂಲ ವ್ಯಕ್ತಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈಗ ಅವರ ಸೇವಾ ಅವಧಿ ಪೂರ್ಣಗೊಂಡಿದ್ದು ಮತ್ತೆ ಶಿಕ್ಷಕರಾಗಿ ಕರ್ತವ್ಯಕ್ಕೆ ಹಾಜರಾಗಿದ್ದರೋ ಈಗ ಮತ್ತೆ ಬೇರೆ ಬೇರೆ ಶಾಲೆಗಳಿಗೆ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಶಿಕ್ಷಕ ವೃತ್ತಿ ಪವಿತ್ರವಾದ ವೃತ್ತಿಯಾಗಿದ್ದು ಬೇರೆ ವೃತ್ತಿಗಿಂತಲೂ ಶಿಕ್ಷಕ ವೃತ್ತಿಗೆ ಹೆಚ್ಚಿನ ಗೌರವ ವೃತ್ತಿಯಲ್ಲಿ ಸಿಗಲಿದೆ. ತಾಲ್ಲೂಕಿನ ವೃತ್ತಗಳಲ್ಲಿ ಅವರಿಗೆ ಶಿಕ್ಷಣ ಇಲಾಖೆ ವಹಿಸಿದ ಕರ್ತವ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಶಿಕ್ಷಣಕ್ಕೆ ಒತ್ತು ಕೊಟ್ಟು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶ್ರಮಿಸಿದ್ದಾರೆ. ಅವರ ಸೇವಾ ಅವಧಿಯಲ್ಲಿ ಶಿಕ್ಷಣ ಇಲಾಖೆಗೆ ಯಾವುದೇ ನ್ಯೂನತೆ ಬರದಂತೆ ಎಚ್ಚರ ವಹಿಸಿ ಶಿಕ್ಷಣ ಇಲಾಖೆಗೆ ಒಳ್ಳೆಯ ಹೆಸರು ತಂದಿದ್ದಾರೆ ಈ ಹಿನ್ನಲೆಯಲ್ಲಿ ಅವರನ್ನು ಶಿಕ್ಷಕ ಸಹ ವೃಂದದ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ ಎಂದರು.

ಕ್ಷೇತ್ರ ಸಂಪನ್ಮೂಲವ್ಯಕ್ತಿ ಗೌರೀಶ್ ಮಾತನಾಡಿ ನಮ್ಮ ಕರ್ತವ್ಯದ ಸಮಯದಲ್ಲಿ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಮಾರ್ಗದರ್ಶನ ನೀಡಿದ್ದಾರೆ. ವೃತ್ತಗಳಲ್ಲಿನ ಶಿಕ್ಷಕ ವೃಂದ ಉತ್ತಮವಾಗಿ ಸ್ಪಂಧನೆ ನೀಡಿ ಕರ್ತವ್ಯದ ಸಮಯದಲ್ಲಿ ಉತ್ತಮ ಸಹಕಾರ ನೀಡಿದ್ದಾರೆ ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ, ಶಿಕ್ಷಣ ಸಂಯೋಜಕರಾದ ಸಿದ್ದಲಿಂಗಸ್ವಾಮಿ, ರೇಷ್ಮಾ ಗೋಕರ್ಣ, ಲಕ್ಷ್ಮಿ▯▯ದೇವಿ, ಸಾವಿತ್ರಿ ಗುಣಿ, ಜೆ.ಸಿ. ಸುರೇಶ್, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಗೌರೀಶ್, ಎಂ. ರಮೇಶ್, ವಿ. ರಮೇಶ್, ಮಂಜಪ್ಪ, ಸಿದ್ದರಾಜು, ರಂಗಸ್ವಾಮಿ, ರಾಮಕೃಷ್ಣಯ್ಯ, ಸನಾವುಲ್ಲಾ, ಶ್ಯಾಮರಾವ್, ಮೃತ್ಯುಂಜಯ, ಶಿವಣ್ಣ ಇವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹೆಚ್. ಹನುಮಯ್ಯ, ತಾಲ್ಲೂಕು ಅಧ್ಯಕ್ಷ ಎಲ್.ಜೆ. ಬಸವಗೌಡ, ಸತೀಶ್‌ಕುಮಾರ್, ಮಂಜುನಾಥ್, ಮುನಿಯಪ್ಪ, ಬಿಆರ್‌ಬಿ ಮಧುಮತಿ, ಇಸಿಓ ರಾಜಣ್ಣ, ನಂಜು0ಡಪ್ಪ, ಪ್ರಮೀಳಾ ಇದ್ದರು.

ತಹಶೀಲ್ದಾರ್ ವರ್ಗಾವಣೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ



ಆನೇಕಲ್: ಆನೇಕಲ್ ತಹಶೀಲ್ದಾರ್ ಶಶಿಧರ್ ಮಡ್ಯಲ್ ಅವರನ್ನು ವರ್ಗಾವಣೆ ಮಾಡಬೇಕು ಹಾಗೂ ಆನೇಕಲ್ ತಾಲೂಕಿನಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಿಪಬ್ಲಿಕ್ ಸೇನೆ ವತಿಯಿಂದ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಯಿತು.

ಕರ್ನಾಟಕ ರಿಪಬ್ಲಿಕ್ ಸೇನೆಯ ರಾಜ್ಯಾಧ್ಯಕ್ಷ ಪ್ರಜ್ವಲ್ ಜಿಗಣಿ ಶಂಕರ್ ಅವರ ಅಧ್ಯಕ್ಷತೆಯಲ್ಲಿ, ತಾಲೂಕು ಅಧ್ಯಕ್ಷ ಮೇಡಳ್ಳಿ ಮುರಳಿ ಅವರ ನೇತೃತ್ವದಲ್ಲಿ ಹಾಗೂ ರಾಜ್ಯ ಉಪಾಧ್ಯಕ್ಷ ಡಾ. ದಲಿತ್ ಚಿನ್ನಪ್ಪ ಮತ್ತು ಜಿಲ್ಲಾಧ್ಯಕ್ಷ ಹೆಬ್ಬಗೋಡಿ ಮುನಿರಾಜು ಅವರ ಸಾರಥ್ಯದಲ್ಲಿ ಧರಣಿ ನಡೆಯಿತು.

ಈ ವೇಳೆ ಆನೇಕಲ್ ತಾಲೂಕಿನಲ್ಲಿ ನಡೆಯುತ್ತಿದೆ ಎಂದು ಸಂಘಟನೆ ಆರೋಪಿಸಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಹಾಗೂ ತಹಶೀಲ್ದಾರ್ ಶಶಿಧರ್ ಮಂಡ್ಯಲ್ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಧರಣಿ ಸ್ಥಳಕ್ಕೆ ವಿಶೇಷ ತಹಶೀಲ್ದಾರ್ ಭೇಟಿ ನೀಡಿ ಮನವಿ ಪತ್ರವನ್ನು ಸ್ವೀಕರಿಸಿದರು. ಇದೇ ವೇಳೆ ಆನೇಕಲ್ ಪೊಲೀಸ್ ಠಾಣೆಯ ವತಿಯಿಂದ ಪ್ರಕಾಶ್ ಅವರು ಸ್ಥಳದಲ್ಲಿ ಹಾಜರಿದ್ದರು.

ಕರ್ನಾಟಕ ರಿಪಬ್ಲಿಕ್ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಹೊಂಪ್ಪಲಘಟ್ಟ ರವಿ, ಪಿ. ಗೊಲ್ಲಹಳ್ಳಿ ಎಲ್ಲಪ್ಪ, ಕಲಾಮಂಡಳಿ ನಾಗರಾಜ್, ಆನೇಕಲ್ ತಾಲೂಕು ಉಪಾಧ್ಯಕ್ಷ ಬಸವರಾಜ್, ಕಾಳಯ್ಯ, ಚೌಡಪ್ಪ, ಬಿ.ಎಂ. ವೆಂಕಟೇಶ್, ಕಂಬಳಿಪುರ ಸುರೇಶ್, ಕೂಡ್ಲು ಜಯರಾಮ್ ಸೇರಿದಂತೆ ಹಲವರು ಹಾಗೂ ಸಂಘಟನೆಯ ಕಾರ್ಯಕರ್ತರು ಧರಣಿಯಲ್ಲಿ ಭಾಗವಹಿಸಿದ್ದರು.

ಮನವಿ ಸ್ವೀಕರಿಸಿದ ಬಳಿಕ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಧರಣಿಯನ್ನು ಕೈಬಿಡುವಂತೆ ಅಧಿಕಾರಿಗಳು ಪ್ರತಿಭಟನಾಕಾರರಿಗೆ ಮನವಿ ಮಾಡಿದರು.

ದುಷ್ಟರ ಸಹವಾಸದಿಂದ ದುಶ್ಚಟಗಳಿಗೆ ದಾಸರಾಗುತ್ತಿರುವ ಬಗ್ಗೆ ಬೇಸರ

ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್; ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಏಕಾಗ್ರತೆ ಸಂಸ್ಕಾರ ತಂದೆ ತಾಯಿಗಳ ಮತ್ತು ಗುರುಗಳ ಮಾರ್ಗದರ್ಶನದಲ್ಲಿ ಒಳ್ಳೆಯ ಶಿಕ್ಷಣ ಪಡೆಯಲು ಮುಂದಾಗ ಬೇಕಾಗಿದೆ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಮಾಜಿ ಶಾಸಕ ಬಿ ಬಿ ರಾಮಸ್ವಾಮಿಗೌಡ ತಿಳಿಸಿದರು

ಅವರು ಪಟ್ಟಣದ ಜ್ಞಾನಭಾರತಿ ಪ್ರಥಮ ದರ್ಜೆ ಕಾಲೇಜು ಹಮ್ಮಿಕೊಂಡಿದ್ದ ಪಯಣ 2026 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ವಿದ್ಯಾರ್ಥಿಗಳು ಬಾಲ್ಯದಲ್ಲಿ ತಂದೆ ತಾಯಿಗಳು ಹಾಗೂ ಶಿಕ್ಷಕರ ಮಾರ್ಗದರ್ಶನದಲ್ಲಿ ಉತ್ತಮ ಸಂಸ್ಕಾರ ನಡುವಳಿಕೆಗಳನ್ನ ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನದಲ್ಲಿ ಒಳ್ಳೆಯ ಸಮಾಜದ ಸದ್ಪ್ರಜೆಯಾಗಿ ಹೊರ ಹೊಮ್ಮಲು ಸಾಧ್ಯವಾಗುವುದರಿಂದ ಬಾಲ್ಯದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಬೇಕಾಗಿದೆ ಎಂದು ತಿಳಿಸಿದರು

ತುಮಕೂರು ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲ ಸಚಿವ ಡಾ. ಎಸ್ ಮೋಹನ್ ಉದ್ಘಾಟಿಸಿ ಮಾತನಾಡುತ್ತಾ ಜಗತ್ತು ವೇಗವಾಗಿ ಬೆಳೆಯುತ್ತಿದ್ದು ಇದರಲ್ಲಿ ವಿದ್ಯಾರ್ಥಿಗಳು ದುಷ್ಟರ ಸಹವಾಸದಿಂದ ತಮ್ಮ ಬದುಕನ್ನ ಮಾನವೀಯ ಗುಣಗಳನ್ನ ಕಳೆದುಕೊಳ್ಳುತ್ತಾ ದುಶ್ಚಟಗಳಿಗೆ ದಾಸರಾಗುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು ವಿದ್ಯಾರ್ಥಿ ದೆಸೆಯಲ್ಲಿ ಪೋಷಕರು ಭದ್ರಬುನಾದಿ ಮಕ್ಕಳಿಗೆ ಕಲಿಸುವ ಮೂಲಕ ಪಠ್ಯದ ಜೊತೆ ಒಳ್ಳೆಯ ಸಂಸ್ಕಾರ ಮಾನವೀಯ ಗುಣಗಳನ್ನು ಬಾಲ್ಯದಿಂದಲೇ ಕಲಿಸುವಂತಹ ನೈತಿಕ ಗುಣಗಳನ್ನು ಪೋಷಕರು ನೀಡುವಂತಾಗಬೇಕು ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಆಟ ಪಾಠ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡದೆ ಅತಿಯಾದ ಮೊಬೈಲ್ ಹಾವಳಿಗೆ ತಮ್ಮ ಬದುಕನ್ನ ಕಳೆದುಕೊಳ್ಳುತ್ತಿದ್ದಾರೆ ವಿದ್ಯಾರ್ಥಿಗಳ ಸಾಧನೆ ಬದುಕು ಸ್ವಾಭಿಮಾನದಿಂದ ಉತ್ತಮ ಶಿಕ್ಷಣ ಪಡೆಯುವ ಮೂಲಕ ಸ್ವಾಭಿಮಾನದ ಬದುಕನ್ನ ಕಟ್ಟಿಕೊಳ್ಳಬೇಕೆಂದು ಸಮಾಜದಲ್ಲಿ ತಮಗೆ ಉನ್ನತ ಗೌರವ ನೀಡಬೇಕಾದರೆ ಉತ್ತಮ ಸಂಸ್ಕಾರವುಳ್ಳ ಶಿಕ್ಷಣ ಪಡೆಯುವಂಥ ಆಗಬೇಕೆಂದು ಕಿವಿಮಾತು ಹೇಳಿದರು

ಈ ಸಂದರ್ಭದಲ್ಲಿ ಒಕ್ಕಲಿಗರ ಸಂಘದ ಉಪಾಧ್ಯಕ್ಷ ತುವೇಕೆರೆ ಗಿರೀಶ್. ಕಾರ್ಯದರ್ಶಿ ಚೆನ್ನಪ್ಪ. ನಿರ್ದೇಶಕರಾದ ಸೀತಾರಾಮಯ್ಯ , ಬೆಟ್ಟಸ್ವಾಮಿ ಗೌಡ. ಪಟೇಲ್. ಕಾಲೇಜು ಪ್ರಾಚಾರ್ಯರಾದ ಗೋವಿಂದೇಗೌಡ. ಉಪಪ್ರಾಚಾರ್ಯ ಪೂರ್ಣಿಮಾ. ರವೀಶ್. ಮುಖ್ಯ ಶಿಕ್ಷಕರಾದ ಪ್ರಕಾಶ್ ಮೂರ್ತಿ. ಗಂಗಮ್ಮ. ಉಪಸ್ಥಿತರಿದ್ದರು

SP NEWS ಸಣ್ ಸುದ್ದಿ

64ನೇ ವರ್ಷದ ಗಣೇಶೋತ್ಸವ ಸಂಪನ್ನ



ಸೂರ್ಯಪ್ರಗತಿನ್ಯೂಸ್.ಕಾಂ

ವಿವಿಧ ಜಾನಪದ ಕಲಾತಂಡಗಳೊಂದಿಗೆ ಚಿಕ್ಕನಾಯಕನಹಳ್ಳಿ:- ಪಟ್ಟಣದ ಮಾರ್ಕೆಟ್ ಬಳಿ ಶ್ರೀ ಸತ್ಯಗಣಪತಿ ಸಾರ್ವಜನಿಕ ತರುಣರ ಸಂಘದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ 64ನೇ ವರ್ಷದ ಗಣೇಶೋತ್ಸವ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸೋಮವಾರ ಅದ್ದೂರಿಯಾಗಿ ಜರುಗಿತು. ಗಣೇಶೋತ್ಸವದಲ್ಲಿ ವೀರಗಾಸೆ, ಸೋಮನಕುಣಿತ, ಅಣ್ಣಮ್ಮನ ತಮಟೆವಾದ್ಯ, ಕೀಲು ಕುದುರೆ, ಗೊಂಬೆ ಬಳಗ, ಗೋರಿಲ್ಲ ಮಿಕ್ಕಿ ಮೌಸ್, ಮೈಸೂರು ನಗಾರಿ, ಡೊಳ್ಳು ಕುಣಿತ ಸೇರಿದಂತೆ ಮಂಗಳ ವಾದ್ಯಗಳೊಂದಿಗೆ ಮಾರುಕಟ್ಟೆಯ ಮೂಲಕ ಅರಳೇಪೇಟೆ, ನೆಹರುವೃತ್ತ, ಖಾಸಗಿ ಬಸ್ ನಿಲ್ದಾಣ, ಶೆಟ್ಟಿಕೆರೆ ಗೇಟ್, ವಿದ್ಯಾನಗರ ಹಾಗೂ ಜೋಗಿಹಳ್ಳಿ ಗೇಟ್ ಮೂಲಕ ಉತ್ಸವ ಹೈಸ್ಕೂಲ್ ಮೈದಾನ ತಲುಪಿದಾಗ ಮದ್ದು ಗುಂಡಿನ ಪ್ರದರ್ಶನ ನಡೆಯಿತು. ಮಂಗಳವಾರ ತಾತಯ್ಯನ ಗೋರಿಯಲ್ಲಿ ಗಣೇಶೋತ್ಸವದ ಪ್ರಯುಕ್ತ ಅನ್ನಸಂತರ್ಪಣೆ ಏರ್ಪಡಿಲಾಗಿತ್ತು. ಪಟ್ಟಣದ ಕೆರೆಯಲ್ಲಿ ಗಣಪತಿಯನ್ನು ವಿಸರ್ಜಿಸಲಾಯಿತು. ಉತ್ಸವದಲ್ಲಿ ಶಾಸಕ ಸಿ.ಬಿ.ಸುರೇಶ್‌ಬಾಬು ಪಾಲ್ಗೊಂಡು ಮದ್ದು ಗುಂಡಿನ ಪ್ರದರ್ಶನಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಮಾಜಿ ಪುರ ಸಭಾಧ್ಯಕ್ಷರುಗಳಾದ ಸಿ.ಎಂ.ರಂಗಸ್ವಾಮಿ, ಕೆಂಗಲ್‌ದಯಾಂದ್, ಎಂ.ಎನ್.ಸುರೇಶ್ ಪುರಸಭಾ ಸದಸ್ಯರುಗಳಾದ ಮಲ್ಲೇಶಯ್ಯ, ಸಿ.ಡಿ.ಸುರೇಶ್, ಮಲ್ಲಿ ಕಾರ್ಜುನ್, ಸಿ.ಹೆಚ್.ಪ್ರಕಾಶ್, ಸಿ.ಬಿ.ರೇಣುಕ ಸ್ವಾಮಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಗುಣಾತ್ಮಕ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಿ



ಮಧುಗಿರಿ; ಗ್ರಾಮೀಣ ಮಕ್ಕಳು ಕೀಳರಿಮೆ ತೊರೆದು ಗುಣಾತ್ಮಕ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳುವಂತೆ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ತಿಳಿಸಿದ್ದಾರೆ ನೇರಳೆ ಕೆರೆಯ ರಂಗನಾಥ ಗ್ರಾಮಾಂತರ ಪ್ರೌಢಶಾಲೆಯಲ್ಲಿ 1999-2000 ಸಾಲಿನ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರು ವಂದನಾ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ನೇರಳೆ ಕೆರೆ ಅಂತಹ ಗ್ರಾಮದಲ್ಲಿ ದೊರೆತ ಅವಕಾಶಗಳನ್ನು ಬಳಸಿಕೊಂಡು ಐಎಎಸ್ ಪಡೆದು ಉನ್ನತ ಹುದ್ದೆಗೆ ಏರಿರುವ ಶ್ರೀಮತಿ ಸತ್ಯಭಾಮ ಡಿ ವೈ ಎಸ್ ಪಿ ಎಂ ಪಾಷಾ ಅವರುಗಳನ್ನು ಆದರ್ಶವಾಗಿಟ್ಟುಕೊಂಡು ಉತ್ತಮ ಶಿಕ್ಷಣ ಪಡೆಯುವಂತೆ ತಿಳಿಸಿದರು ಗ್ರಾಮೀಣ ಪ್ರದೇಶದ ಮಕ್ಕಳು ಯಾರಿಗೂ ಕಡಿಮೆ ಇಲ್ಲ ಅವರು ದೊರೆತ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು ನಿವೃತ್ತ ಮುಖ್ಯ ಶಿಕ್ಷಕ ಹನುಮಣ್ಣ ಮಾತನಾಡಿ ಕಲಿತ ಶಾಲೆ ಮತ್ತು ಶಿಕ್ಷಕರನ್ನು ಗೌರವಿಸುವಂತಹ ಸಂಸಾರಕ್ಕೆ ಅಭಿನಂದನೆಗಳನ್ನು ತಿಳಿಸಿ ಜನ್ಮ ನೀಡಿದ ಹಾಗೂ ನಿಮ್ಮ ಭವಿಷ್ಯಕ್ಕೆ ಕಾರಣರಾದ ಪೋಷಕರನ್ನು ಅವರ ಇಳಿ ವಯಸ್ಸಿನಲ್ಲಿ ಗೌರವದಿಂದ ಕಾಣಿರಿ ಆಗ ನಿಮ್ಮ ಭವಿಷ್ಯ ಉಜ್ವಲವಾಗುತ್ತದೆ ಎಂದು ತಿಳಿಸಿದರು ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಜಿಲ್ಲಾಧಿಕಾರಿ ಶ್ರೀಮತಿ ಸತ್ಯಭಾಮ ನಿವೃತ್ತ ಡಿ ವೈ ಎಸ್ ಪಿ ಎಂ ಪಾಷಾ ಆಡಿಟರ್ ಗುರುಲಿಂಗಯ್ಯ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು

ತೆಲುಗು ನಾಡಿನ ನಡುವೆ ಕನ್ನಡದ ಕೂಗು ಪಾವಗಡಕ್ಕೆ ಬೇಕು ಸಾಂಸ್ಕೃತಿಕ ವೇದಿಕೆ!

ಸೂರ್ಯಪ್ರಗತಿನ್ಯೂಸ್.ಕಾಂ



ಕನ್ನಡ ನಾಡಿನ ಗಡಿಭಾಗದಲ್ಲಿರುವ ಪಾವಗಡ ತಾಲೂಕು ಮೂರೂ ಕಡೆ ಆಂಧ್ರಪ್ರದೇಶದಿಂದ ಆವೃತವಾಗಿದ್ದರೂ, ತನ್ನ ವಿಶಿಷ್ಟ ಭೌಗೋಳಿಕ ಮತ್ತು ಸಾಂಸ್ಕೃತಿಕ ಗುರುತನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ನೆರೆ ರಾಜ್ಯದ ತೆಲುಗು ಭಾಷೆಯ ಪ್ರಭಾವ ದೈನಂದಿನ ಸಂವಹನದಲ್ಲಿದ್ದರೂ, ಈ ನೆಲದ ಆಡಳಿತ, ಆಲೋಚನೆ ಹಾಗೂ ಸಾಂಸ್ಕೃತಿಕ ಜೀವನಾಡಿ ಕನ್ನಡವೇ ಆಗಿದೆ.

ಹಿರಿಯ ಸಾಹಿತಿಗಳು, ಉದಯೋನ್ಮುಖ ಬರಹಗಾರರು, ಜಾನಪದ ಕಲಾಬಳಗ ಹಾಗೂ ರಂಗಕರ್ಮಿಗಳಿಂದ ಸಮೃದ್ಧವಾಗಿರುವ ಈ ತಾಲೂಕಿನಲ್ಲಿ ಕನ್ನಡ ನಾಡು-ನುಡಿಯ ಚಟುವಟಿಕೆಗಳು ಸದಾ ಜಾಗೃತವಾಗಿರುತ್ತವೆ. ಆದರೆ, ಇಷ್ಟೊಂದು ಕ್ರಿಯಾಶೀಲ ಸಾಹಿತ್ಯಿಕ ವಾತಾವರಣವಿದ್ದರೂ, ತಾಲೂಕು ಕೇಂದ್ರದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲು ಒಂದು ಸುಸಜ್ಜಿತ 'ಕನ್ನಡ ಭವನ'ವಿಲ್ಲದಿರುವುದು ತೀವ್ರ ಕೊರತೆಯಾಗಿ ಕಾಣಿಸುತ್ತಿದೆ.

ಸಭಾಂಗಣಗಳಿಲ್ಲದೆ ಪರದಾಟ

ಪ್ರಸ್ತುತ ಪಟ್ಟಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು ಹೊರತುಪಡಿಸಿದರೆ ಯಾವುದೇ ಸುಸಜ್ಜಿತ ಸಭಾಂಗಣಗಳಿಲ್ಲ. ಇರುವ 'ಗುರುಭವನ'ವೂ ಸಹ ಸೂಕ್ತ ನಿರ್ವಹಣೆಯಿಲ್ಲದೆ ಸೊರಗಿದೆ. ಪರಿಣಾಮವಾಗಿ, ಸಣ್ಣ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಬೇಕೆಂದರೂ ಧ್ವನಿವರ್ಧಕ, ಕುರ್ಚಿ ಸೇರಿದಂತೆ ಪ್ರತಿಯೊಂದನ್ನೂ ಬಾಡಿಗೆಗೆ ತರಬೇಕಾದ ಅನಿವಾರ್ಯತೆ ಇದೆ. ಇದು ಕನ್ನಡಪರ ಸಂಘ-ಸಂಸ್ಥೆಗಳಿಗೆ ಆರ್ಥಿಕವಾಗಿ ದೊಡ್ಡ ಹೊರೆಯಾಗಿ ಪರಿಣಮಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡಪರ ಸಂಘಟನೆಗಳು ಹಲವು ಬಾರಿ ಮನವಿ ಸಲ್ಲಿಸಿದರೂ ಭರವಸೆ ಬಿಟ್ಟರೆ ಬೇರೇನೂ ಸಿಕ್ಕಿಲ್ಲ ಎಂದು ಸ್ಥಳೀಯ ಸಾಹಿತಿಗಳು ಅಳಲು ತೋಡಿಕೊಂಡಿದ್ದಾರೆ.

ಜನಪ್ರತಿನಿಧಿಗಳಿಗೆ ಮನವಿ

"ಮೂರೂ ಕಡೆ ಆಂಧ್ರಪ್ರದೇಶದಿಂದ ಆವೃತವಾಗಿರುವ ಇಲ್ಲಿ ತೆಲುಗು ಭಾಷೆಯ ಪ್ರಭಾವವಿದ್ದರೂ, ಆಡಳಿತಾತ್ಮಕವಾಗಿ ಹಾಗೂ ದೈನಂದಿನ ವ್ಯವಹಾರದಲ್ಲಿ ಕನ್ನಡವೇ ಉಸಿರಾಗಿದೆ. ಇಂತಹ ಗಡಿಭಾಗದಲ್ಲಿ ಕನ್ನಡ ನಾಡು-ನುಡಿ ಹಾಗೂ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು 'ಕನ್ನಡ ಭವನ' ಅತ್ಯಗತ್ಯ" ಎಂಬುದು ಕನ್ನಡಾಭಿಮಾನಿಗಳ ಒಕ್ಕೊರಲ ಆಗ್ರಹವಾಗಿದೆ.

ಶಾಸಕರಾದ ಹೆಚ್.ವಿ. ವೆಂಕಟೇಶ್, ಸಂಸದರಾದ ಗೋವಿಂದ ಕಾರಜೋಳ, ವಿಧಾನ ಪರಿಷತ್ ಸದಸ್ಯರಾದ ಆರ್. ರಾಜೇಂದ್ರ ಹಾಗೂ ಡಿ.ಟಿ. ಶ್ರೀನಿವಾಸ್ ಅವರು ತಮ್ಮ ಪ್ರದೇಶಾಭಿವೃದ್ಧಿ ಅನುದಾನದಲ್ಲಿ 'ಕನ್ನಡ ಭವನ' ನಿರ್ಮಾಣಕ್ಕೆ ವಿಶೇಷ ನಿಧಿ ಮೀಸಲಿಡಬೇಕು ಎಂದು ಸಾರ್ವಜನಿಕರು ಹಾಗೂ ಕನ್ನಡಾಭಿಮಾನಿಗಳು ಮನವಿ ಮಾಡಿದ್ದಾರೆ. ಅಲ್ಲದೆ, ಗಡಿನಾಡು ಅಭಿವೃದ್ಧಿ ಪ್ರಾಧಿಕಾರ ಹಾಗೂ ತಾಲೂಕಿನಲ್ಲಿ ಲಭ್ಯವಿರುವ ಸೋಲಾರ್ ಕಂಪನಿಗಳ ಸಿಎಸ್ ಆರ್ ನಿಧಿಯನ್ನೂ ಸೂಕ್ತವಾಗಿ ಬಳಸಿಕೊಂಡು, ತಕ್ಷಣವೇ ಸುಸಜ್ಜಿತ 'ಕನ್ನಡ ಭವನ' ನಿರ್ಮಿಸಿಕೊಡಬೇಕೆಂದು ಕನ್ನಡ ಪ್ರೇಮಿಗಳು, ಸಾಹಿತಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಹಾಗೂ ಜಾನಪದ ಸಂಸ್ಕೃತಿ ಜೀವಂತವಾಗಿ ಉಳಿಯಬೇಕಾದರೆ ಕೇವಲ ಸಾಹಿತಿಗಳ ಮತ್ತು ಕನ್ನಡಪರ ಸಂಘಟನೆಗಳ ಶ್ರಮವಷ್ಟೇ ಸಾಲದು, ಅವರಿಗೆ ತಕ್ಕುದಾದ ಮೂಲಸೌಕರ್ಯ ಕಲ್ಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಗಡಿನಾಡ ಕನ್ನಡಿಗರ ದಶಕಗಳ ಕನಸನ್ನು ಈಡೇರಿಸಲು ಜನಪ್ರತಿನಿಧಿಗಳು, ಜಿಲ್ಲಾಡಳಿತ ಹಾಗೂ ಗಡಿನಾಡು ಅಭಿವೃದ್ಧಿ ಪ್ರಾಧಿಕಾರ ಕೂಡಲೇ ಸ್ಪಂದಿಸಬೇಕು.



ರಾಜ್ಯ ಮಟ್ಟದ ಹ್ಯಾಂಡ್‌ಬಾಲ್‌ನಲ್ಲಿ

ಎಸ್‌ಬಿಜಿ ವಿದ್ಯಾಲಯ ಚಾಂಪಿಯನ್: ರಾಷ್ಟ್ರಮಟ್ಟಕ್ಕೆ ಆಯ್ಕೆ



ಸೂರ್ಯಪ್ರಗತಿನ್ಯೂಸ್.ಕಾಂ

ತುರುವೇಕೆರೆ: ತಾಲ್ಲೂಕಿನ ಮಾಯಸಂದ್ರದ ಎಸ್‌ಬಿಜಿ ವಿದ್ಯಾಲಯದ 17 ವರ್ಷದೊಳಗಿನ ಬಾಲಕರ ಹ್ಯಾಂಡ್‌ಬಾಲ್ ತಂಡವು ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ರಾಷ್ಟ್ರಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆದಿದೆ.

ಚಿತ್ರದುರ್ಗದಲ್ಲಿ ಅಕ್ಟೋಬರ್ 5 ಮತ್ತು 6 ರಂದು ನಡೆದ ರಾಜ್ಯಮಟ್ಟದ ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಶ್ರೇಷ್ಠ ಪ್ರದರ್ಶನ ನೀಡಿದ ಶಾಲಾ ತಂಡವು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಈ ಮೂಲಕ 2027ರ ಜನವರಿಯಲ್ಲಿ ಉತ್ತರ ಪ್ರದೇಶದ ವಾರಣಾಸಿಯಲ್ಲಿ ಆಯೋಜಿಸಲಾಗಿರುವ ರಾಷ್ಟ್ರಮಟ್ಟದ ಹ್ಯಾಂಡ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಹೆಗ್ಗಳಿಕೆಗೆ ಪಾತ್ರವಾಗಿದೆ.

ರಾಜ್ಯಮಟ್ಟದಲ್ಲಿ ಜಯಗಳಿಸಿ ಶಾಲೆ ಹಾಗೂ ತಾಲ್ಲೂಕಿಗೆ ಕೀರ್ತಿ ತಂದ ವಿಜೇತ ಕ್ರೀಡಾಪಟುಗಳನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿ ಹಾಗೂ ಶ್ರೀ ರಾಜಯೋಗಾನಂದನಾಥ ಸ್ವಾಮೀಜಿ ಆಶೀರ್ವದಿಸಿ ಹಾರೈಸಿದ್ದಾರೆ.

ಜೊತೆಗೆ ಕರ್ನಾಟಕ ಹ್ಯಾಂಡ್‌ಬಾಲ್ ಸಂಸ್ಥೆಯ ಉಪಾಧ್ಯಕ್ಷರಾದ ಪ್ರೊ. ಕೆ. ಪುಟ್ಟರಂಗಪ್ಪ, ವಿದ್ಯಾಲಯದ ಪ್ರಾಚಾರ್ಯರಾದ ಗಿರೀಶ್ ಹಾಗೂ ತಂಡಕ್ಕೆ ಕಠಿಣ ತರಬೇತಿ ನೀಡಿದ ದೈಹಿಕ ಶಿಕ್ಷಣ ನಿರ್ದೇಶಕ ಉದಯ್ ಕುಮಾರ್ ಅವರು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿ, ಮುಂಬರುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಶುಭ ಕೋರಿದ್ದಾರೆ.

ಹಲವಾರು ಮುಖಂಡರು ವೈಯಕ್ತಿಕ ವರ್ಚಸ್ಸಿನಿಂದ ರಾಜ್ಯ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ್ದಾರೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು ನಗರದ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ತುಮಕೂರು ಜಿಲ್ಲಾ ಸವಿತಾ ಸಮಾಜ ಯುವ ಪಡೆ (ರಿ) ಇವರ ವತಿಯಿಂದ ಆಯೋಜಿಸಲಾಗಿದ್ದ ಸವಿತಾ ಸಮಾಜದ ಜಾಗೃತಿ ಹಾಗೂ ಶೈಕ್ಷಣಿಕ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ನಗರ ಶಾಸಕ ಜಿ.ಬಿ.ಜ್ಯೋತಿಗಣೇಶ್ ಸವಿತಾ ಸಮಾಜದ ಹಲವಾರು ಮುಖಂಡರು ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ಇಂದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಉತ್ತಮವಾದ ಸಾಧನೆಯನ್ನು ಮಾಡಿದ್ದಾರೆ ಸಮಾಜದ ಹಿರಿಯ ಸಾಧಕರ ಮಾರ್ಗದರ್ಶನದಲ್ಲಿ ಇಂದಿನ ಯುವಕರು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಇಂದು ತುಮಕೂರು ಜಿಲ್ಲೆಯ ಯುವಪಡೆ ನಿಜಕ್ಕೂ ಉತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿರುತ್ತದೆ ಕಟ್ ವೆಲ್ ರಂಗನಾಥ್ ಅವರು ಸಮಾಜದ ಯುವ ಪೀಳಿಗೆಗೆ ಜಾಗೃತಿ ಮತ್ತು ಶೈಕ್ಷಣಿಕ ಸಮಾ ವೇಶವನ್ನು ಆಯೋಜನೆ ಮಾಡಿರುವುದು ಶ್ಲಾಘನೆಯ ವಿಚಾರ ಇಂತಹ ಕಾರ್ಯ ಕ್ರಮಗಳು ನಿರಂತರವಾಗಿ ನಡೆಯಲಿ ಎಂದು ನಾನು ಆಶಿಸುತ್ತೇನೆ ಸವಿತಾ ಸಮಾಜದ ಸರ್ವತೋ ಮುಖ ಅಭಿವೃದ್ಧಿಗೆ ಸದಾ ನನ್ನ ಸಹಕಾರವಿರುತ್ತದೆ ಎಂದು ತಿಳಿಸಿದರು.

ಸವಿತಾ ಸಮಾಜದ ಮುಖಂಡರು ಹಾಗೂ ಟಿಟಿಡಿ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರಾದ ಎನ್. ಎಸ್.ನರೇಶ್ ಮಾತನಾಡಿ ರಾಜ್ಯದಲ್ಲಿ ಸವಿತಾ ಸಮಾಜದ ಯುವ ಜನತೆಗೆ ಹಾಗೂ ಸಮಾಜಕ್ಕೆ ಸರ್ಕಾರದಿಂದ ಬರುವ ಸೌಲತ್ತುಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಕೆಲಸವಾಗಬೇಕಾಗಿದೆ ಅಂತಹ ಕೆಲಸವನ್ನು ತುಮಕೂರು ಜಿಲ್ಲೆಯಲ್ಲಿ ರಂಗನಾಥ್ ಅವರು ಪ್ರಾರಂಭ ಮಾಡಿದ್ದು ಸಂತಸದ ವಿಚಾರವಾಗಿದೆ ಸವಿತಾ ಸಮಾಜ ಮುಖ್ಯವಾಗಿ ಸಾಮಾಜಿಕ ಶೈಕ್ಷಣಿಕ ಆರ್ಥಿಕ ರಾಜಕೀಯವಾಗಿ ಸಮಾಜದ ಮುನ್ನೆಲೆಗೆ ಬರಬೇಕಾದ ಅನಿವಾರ್ಯತೆ ಇದೆ ಈ ಹಿಂದೆ ಇದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ನಮ್ಮ ಸಮಾಜಕ್ಕೆ ಅತಿ ಹೆಚ್ಚಿನ ಪ್ರೋತ್ಸಾಹ ನೀಡಿತ್ತು . ಅದೇ ರೀತಿಯಾಗಿ ಈಗಿನ ಯುವಕರು ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪಡೆದು ಕೊಳ್ಳಬೇಕು ಅದಕ್ಕೆ ನಾವೆಲ್ಲರೂ ಜಾಗೃತರಾಗಿ ಸಾಮಾಜಿಕ ಶೈಕ್ಷಣಿಕ ಆರ್ಥಿಕ ಮತ್ತು ರಾಜಕೀಯವಾಗಿ ಬೆಳೆದಾಗ ಇಂತಹ ಯೋಜನೆಗಳನ್ನು ನಾವು ನಮ್ಮ ಸಮಾಜಕ್ಕೆ ನೀಡುವಂತಹ ಶಕ್ತಿ ನಮ್ಮಲ್ಲಿ ಬರುತ್ತದೆ ಎಂದು ತಿಳಿಸಿದರು ತುಮಕೂರು ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಸವಿತಾ ಸಮಾಜದ ಯುವ ಪಡೆಗೆ ನಾನು ತನು ಮನ ಧನ ನೀಡುತ್ತಾ ಸಹಕಾರ ನೀಡುತ್ತೇನೆ ಎಂದು ತಿಳಿಸಿದರು.

ತುಮಕೂರು ಜಿಲ್ಲೆಯ ಸವಿತಾ ಸಮಾಜದ ಯುವ ಪಡೆಯ ಜಿಲ್ಲಾಧ್ಯಕ್ಷರಾದ ಕಟ್ ವೆಲ್ ರಂಗನಾಥ್ ರವರು ಮಾತನಾಡಿ ನಾನು ಒಂದು ಸಣ್ಣ ಸಮುದಾಯದಲ್ಲಿ ಜನಿಸಿ, ಆ ಸಮುದಾಯಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ದೃಷ್ಟಿಯಿಂದ ತುಮಕೂರು ಜಿಲ್ಲೆಯಲ್ಲಿ ಸವಿತಾ ಸಮಾಜದ ಯುವಪಡೆಯನ್ನು ಕಟ್ಟುವ ಮೂಲಕ ನಮ್ಮ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಸಾಕಷ್ಟು ಅಶಕ್ತರಿಗೆ ಶಕ್ತಿ ನೀಡುವ ಮೂಲಕ ಸಮಾಜವನ್ನು ಕಟ್ಟುವ ಕೆಲಸ ಮಾಡುತ್ತಾ ಬಂದಿದ್ದೇವೆ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನು ನೀಡುತ್ತಾ ಅವರ ವಿದ್ಯಾಭ್ಯಾಸ ಹೆಚ್ಚಿನ ರೀತಿಯಲ್ಲಿ ನಡೆಯುವಂತೆ ಮಾಡುವುದೇ ನಮ್ಮ ಸಂಕಲ್ಪವಾಗಿದೆ ನಮ್ಮ ಸಮಾಜದ ಹಿರಿಯರು ಮತ್ತು ಉದ್ಯಮಿಗಳು ನಮಗೆ ಇನ್ನೂ ಹೆಚ್ಚಿನ ಸಹಕಾರ ನೀಡಿದರೆ ನಾವುಗಳು ಇಂತಹ ಹಲವಾರು ರೀತಿಯ ಜಾಗೃತಿ ಮತ್ತು ಸಮಾಜವನ್ನು ಒಗ್ಗೂಡಿಸುವಂತಹ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ ಹಾಗಾಗಿ ನಿಮ್ಮೆಲ್ಲರ ಸಹಕಾರ ನಮ್ಮ ಯುವಪಡೆಗೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಸುಮಾರು 300 ಜನ ಸವಿತಾ ಸಮಾಜದ ಕಲಾವಿದರಿಗೆ ಗೌರವ ಸಮರ್ಪಣೆ, 200 ಜನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೆರವೇರಿಸಲಾಯಿತು. ಕಾರ್ಯಕ್ರಮ ಪ್ರಾರಂಭಕ್ಕೂ ಮುಂಚಿತವಾಗಿ ಚುಟುಕು ಶೋಭಾ ಯಾತ್ರೆಯನ್ನು ಬಿಜಿಎಸ್ ವೃತ್ತದಿಂದ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣದವರೆಗೂ ಹಮ್ಮಿಕೊಂಡಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ನಗರ ಶಾಸಕರಾದ ಜಿ.ಬಿ.ಜ್ಯೋತಿ ಗಣೇಶ್, ಸವಿತಾ ಸಮಾಜ ಯುವ ಪಡೆಯ ಜಿಲ್ಲಾಧ್ಯಕ್ಷರಾದ ಕಟ್ ವೆಲ್ ರಂಗನಾಥ್, ಸವಿತಾ ಸಮಾಜದ ಮುಖಂಡರುಗಳಾದ ಎನ್.ಎಸ್.ನರೇಶ್, ನಂದೀಶ್ ಎನ್, ರಮೇಶ್ ಬಾಬು, ಕಿರಣ್ ಕುಮಾರ್, ಡಾ. ವಿ.ವಿ.ಸದಾನಂದ್, ಡಾ. ಕೆ.ಸಿ.ಬಸವರಾಜು, ಲಕ್ಷ್ಮೀ ನಾರಾಯಣ (ಪಾಪಣ್ಣ), ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸವಿತಾ ಸಮಾಜದ ಅಧ್ಯಕ್ಷರು, ಪ್ರತಿನಿಧಿ ಹಾಗೂ ಸದಸ್ಯರುಗಳು ಮತ್ತು ಕಲಾವಿದರುಗಳು ಆಗಮಿಸಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಗತಿಕ ಮಾರುಕಟ್ಟೆ ಯಲ್ಲಿಯೂ ಹೆಚ್ಚಿದ ಬೇಡಿಕೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಕೈಮಗ್ಗ ಮತ್ತು ಜವಳಿ ಕ್ಷೇತ್ರದಲ್ಲಿ ಸ್ಥಳೀಯ ಕಲೆ, ವಿನ್ಯಾಸ, ಕರ ಕುಶಲತೆ ಹಾಗೂ ಸಾಂಪ್ರದಾಯಿಕ ವೈಶಿಷ್ಟ್ಯಗಳಿಗೆ ದೇಶಿಯ ಮಾರುಕಟ್ಟೆ ಜೊತೆಗೆ ಜಾಗತಿಕ ಮಾರು ಕಟ್ಟೆಯಲ್ಲೂ ಬೇಡಿಕೆ ಹೆಚ್ಚಾಗಿದ್ದು ಉದ್ಯಮಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದರು.

ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ನಗರದ ಶ್ರೀ ಸಿದ್ಧಾರ್ಥ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ಜೆನಿತ್ ಹಾಲ್‌ನಲ್ಲಿಂದು **"Departmental Summit on Textiles For the Global market"** ಕುರಿತು ಏರ್ಪಡಿಸಿದ್ದ ಜವಳಿ ವಲಯದ ಪ್ರೋತ್ಸಾಹನ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಕೈಮಗ್ಗ ಮತ್ತು ಜವಳಿ ಉದ್ಯಮಿಗಳು ಇಂತಹ ಕಾರ್ಯಾಗಾರಗಳಲ್ಲಿ ಭಾಗವಹಿಸಿ ನವೀನ ಶೈಲಿಯ ವಿನ್ಯಾಸಗಳ ಬಗ್ಗೆ ತಿಳಿದುಕೊಂಡು ತಮ್ಮ ಉದ್ಯಮದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕೈಮಗ್ಗ ಮತ್ತು ಜವಳಿ ಇಲಾಖೆ ಜಂಟಿ ನಿರ್ದೇಶಕಿ ಸುಮಲತ ಡಿ. ಪ್ರಾಸ್ತಾವಿಕವಾಗಿ ಮಾತನಾಡಿ 2030ಕ್ಕೆ ಭಾರತ ದೇಶದಿಂದ **USD 100 Billion dollar** ರಫ್ತು ಮಾಡುವ ಗುರಿ ಹೊಂದಿರುವುದಾಗಿ ತಿಳಿಸಿ ಜಿಲ್ಲೆಯಲ್ಲಿ ಜವಳಿ ಉತ್ಪನ್ನಗಳನ್ನು ರಫ್ತು ಮಾಡಲು ಯೋಜನೆ ರೂಪಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಮೊಹಮ್ಮದ್ ಎ.ಶರೀಫ್ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕ ಜಿ.ಜಿ.ಸಂತೋಷ್, ಸಹಾಯಕ ನಿರ್ದೇಶಕಿ ಸೌಮ್ಯ ಜಿ., ಅಧೀಕ್ಷಕಿ ಹೇಮಾವತಿ ಆರ್ ಹಾಗೂ ಪೂರ್ವ ವಲಯ ತುಮಕೂರು ವಿಭಾಗದ 8 ಜಿಲ್ಲೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, 100ಕ್ಕೂ ಹೆಚ್ಚು ಜವಳಿ ಉದ್ಯಮದಾರರು ಭಾಗವಹಿಸಿದ್ದರು.

ಎಎಪಿ ರಾಷ್ಟ್ರೀಯ ಮಂಡಳಿಗೆ ರಾಮಾಂಜನಪ್ಪ ಆಯ್ಕೆ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ; ತಾಲೂಕಿಗೆ ಮತ್ತೊಂದು ರಾಷ್ಟ್ರಮಟ್ಟದ ಗೌರವ ಲಭಿಸಿದೆ. ತಾಲೂಕಿನ ಜನಪರ ಹೋರಾಟಗಾರ, ಆಮ್ ಆದ್ಮಿ ಪಾರ್ಟಿಯ (ಎಎಪಿ) ಹಿರಿಯ ಮುಖಂಡರಾದ ರಾಮಾಂಜನಪ್ಪ ನವರು ಎಎಪಿ ರಾಷ್ಟ್ರೀಯ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಕಳೆದ ಹಲವು ವರ್ಷಗಳಿಂದ ಪಾವಗಡ ತಾಲೂಕಿನಲ್ಲಿ ಸಾಮಾನ್ಯ ಜನರ ಸಮಸ್ಯೆಗಳಿಗಾಗಿ, ರೈತರು, ಕಾರ್ಮಿಕರು, ದಲಿತ ಸಮುದಾಯದ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿರುವ ರಾಮಾಂಜನಪ್ಪ ನವರ ಸೇವೆಯನ್ನು ಗುರುತಿಸಿ ಪಕ್ಷದ ರಾಷ್ಟ್ರೀಯ ನಾಯಕತ್ವ ಈ ಮಹತ್ವದ ಜವಾಬ್ದಾರಿಯನ್ನು ನೀಡಿದೆ. ಈ ಆಯ್ಕೆಯು ಕೇವಲ ಒಬ್ಬ ವ್ಯಕ್ತಿಯ ಗೌರವವಲ್ಲ, ಇಡೀ ಪಾವಗಡ ತಾಲೂಕಿನ ಗೌರವ ಎಂದು ಬಣ್ಣಿಸಲಾಗುತ್ತಿದೆ. ಗಡಿಭಾಗದಂತಹ ಹಿಂದುಳಿದ ತಾಲೂಕಿನಿಂದ ಒಬ್ಬ ಸಾಮಾನ್ಯ ಕಾರ್ಯಕರ್ತ ರಾಷ್ಟ್ರೀಯ ಮಟ್ಟಕ್ಕೆ ಹೋಗಿರುವುದು ಅನೇಕ ಯುವಕರಿಗೆ ಸ್ಫೂರ್ತಿಯಾಗಿದೆ.

ತಾಲೂಕಿನಾದ್ಯಂತ ಹೃತ್ಪೂರ್ವಕ ಅಭಿನಂದನೆ

ರಾಮಾಂಜನಪ್ಪನವರ ಆಯ್ಕೆಯ ಸುದ್ದಿ ತಿಳಿಯುತ್ತಿದ್ದಂತೆ ಪಾವಗಡ ತಾಲೂಕಿನ ಎಲ್ಲಾ ಸಮುದಾಯದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ರೈತ ಮುಖಂಡರು, ಯುವಕರು ಹೃತ್ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದ್ದಾರೆ. "ಜಾತಿ, ಧರ್ಮ, ಪಕ್ಷ ಬೇಧ ಮರೆತು ಎಲ್ಲ ಸಮುದಾಯದ ಜನರೊಂದಿಗೆ ಬೆರೆಯುವ ರಾಮಾಂಜನಪ್ಪನವರ ಸರಳತೆ, ಪ್ರಾಮಾಣಿಕತೆಗೆ ಸಿಕ್ಕ ಪ್ರತಿಫಲವಿದು. ಅವರಿಂದ ತಾಲೂಕಿಗೆ ಇನ್ನಷ್ಟು ಉತ್ತಮ ಕೆಲಸಗಳು ನಡೆಯಲಿ" ಎಂದು ಅಭಿಮಾನಿಗಳು ಹಾರೈಸಿದ್ದಾರೆ.

ಪಾವಗಡದಂತಹ ಗಡಿಭಾಗದಿಂದ ರಾಷ್ಟ್ರೀಯ ಪಕ್ಷವೊಂದರ ಅತ್ಯುನ್ನತ ಮಂಡಳಿಗೆ ಆಯ್ಕೆಯಾಗಿರುವುದು ತಾಲೂಕಿನ ರಾಜಕೀಯ ಇತಿಹಾಸದಲ್ಲೇ ಒಂದು ಮೈಲಿಗಲ್ಲಾಗಿದೆ.

ಓಪನ್ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿ 2026: ರಾಯಲ್ ಚಾಲೆಂಜರ್ಸ್ ತಂಡ ಚಾಂಪಿಯನ್

ಸೂರ್ಯಪ್ರಗತಿನ್ಯೂಸ್.ಕಾಂ



ಕೊರಟಗೆರೆ:- ತಾಲ್ಲೂಕಿನ ಹೊಳವನಹಳ್ಳಿ ಹೋಬಳಿ ಅರಸಾಪುರ ಗ್ರಾಮದಲ್ಲಿ ರಾಯಲ್ ಚಾಲೆಂಜರ್ಸ್ ವತಿಯಿಂದ ಎರಡು ದಿನಗಳ ಕಾಲ ಆಯೋಜಿಸಲಾಗಿದ್ದ ಬೃಹತ್ ಓಪನ್ ಟೆನಿಸ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ಅರಸಾಪುರದ ರಾಯಲ್ ಚಾಲೆಂಜರ್ಸ್ ತಂಡ ಭರ್ಜರಿ ಜಯ ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಬೆಂಗಳೂರಿನ ಆರ್.ಆರ್. ನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ತುಮಕೂರು, ಕೊರಟಗೆರೆ, ಮಧುಗಿರಿ, ಗೌರಿಬಿದನೂರು ಸೇರಿದಂತೆ ವಿವಿಧ ಭಾಗಗಳಿಂದ 20ಕ್ಕೂ ಹೆಚ್ಚು ಪ್ರಮುಖ ತಂಡಗಳು ಈ ಸರಣಿಯಲ್ಲಿ ಪಾಲ್ಗೊಂಡಿದ್ದವು. ತೀವ್ರ ಕುತೂಹಲ ಕೆರಳಿಸಿದ್ದ ಅಂತಿಮ ಹಣಾಹಣಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಅರಸಾಪುರದ ರಾಯಲ್ ಚಾಲೆಂಜರ್ಸ್ ಪ್ರಥಮ ಸ್ಥಾನ ಪಡೆದರೆ, ಗೌರಿಬಿದನೂರು ತಾಲ್ಲೂಕಿನ ಕೆ.ಟಿ.ಹಳ್ಳಿ ಗ್ರಾಮದ ರವಿ ಸ್ಪಾರ್ಕ್ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಪ್ರಥಮ ಸ್ಥಾನ ಪಡೆದ ಆತಿಥೇಯ ರಾಯಲ್ ಚಾಲೆಂಜರ್ಸ್ ತಂಡಕ್ಕೆ 22,222 ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿಯನ್ನು ಗ್ರಾಮದ ಯುವ ಮುಖಂಡ ನಯಾಜ್ ಅಹಮದ್ ಮತ್ತು ಅವರ ಕುಟುಂಬದವರು ವಿತರಿಸಿದರು. ದ್ವಿತೀಯ ಸ್ಥಾನ ಪಡೆದ ಕೆ.ಟಿ.ಹಳ್ಳಿಯ ರವಿ ಸ್ಪಾರ್ಕ್ ತಂಡಕ್ಕೆ [illegible]11,111 ನಗದು ಹಾಗೂ ಟ್ರೋಫಿಯನ್ನು ಗ್ರಾಮದ ಮುಖಂಡ ಎ.ಎನ್. ಮಂಜುನಾಥ್ ಹಾಗೂ ರಾಯಲ್ ಚಾಲೆಂಜರ್ಸ್ ತಂಡದವರು ಪ್ರದಾನ ಮಾಡಿದರು.

ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಯುವ ಮುಖಂಡ ನಯಾಜ್ ಅಹಮದ್, "ಕ್ರೀಡೆಯಲ್ಲಿ ಗೆಲುವು-ಸೋಲಿಗಿಂತ ಕ್ರೀಡಾಸ್ಫೂರ್ತಿ, ಶಿಸ್ತು ಮತ್ತು ಸ್ನೇಹಭಾವ ಮುಖ್ಯ. ಗ್ರಾಮೀಣ ಯುವಕರ ಪ್ರತಿಭೆಗೆ ಕ್ರೀಡೆಗಳು ಉತ್ತಮ ವೇದಿಕೆಯಾಗಿದ್ದು, ಗೆದ್ದಾಗ ವಿನಯದಿಂದಿರಬೇಕು, ಸೋತಾಗ ಧೈರ್ಯದಿಂದ ಪಾಠ ಕಲಿತು ಮುಂದಿನ ಯಶಸ್ಸಿಗೆ ಶ್ರಮಿಸಬೇಕು" ಎಂದು ಸಲಹೆ ನೀಡಿದರು.

ನಾಸಿಕ್ ಡೋಲ್‌ಗೆ ಕುಣಿದು ವಿಜಯೋತ್ಸವ:

ಸ್ವಂತ ಊರಿನ ರಾಯಲ್ ಚಾಲೆಂಜರ್ಸ್ ತಂಡ ಕಿರೀಟ ಮುಡಿಗೇರಿಸಿಕೊಳ್ಳುತ್ತಿದ್ದಂತೆ ಅರಸಾಪುರ ಗ್ರಾಮದಲ್ಲಿ ಸಂಭ್ರಮ ಮುಗಿಲುಮುಟ್ಟಿತ್ತು. ರಾಯಲ್ ಚಾಲೆಂಜರ್ಸ್ ತಂಡದ ಆಟಗಾರರು ಹಾಗೂ ಗ್ರಾಮಸ್ಥರು ನಾಸಿಕ್ ಡೋಲ್ ವಾದ್ಯದ ತಾಳಕ್ಕೆ ಹೆಜ್ಜೆ ಹಾಕುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆಯ ಮೂಲಕ ವಿಜಯೋತ್ಸವ ಆಚರಿಸಿದರು.

ಟೂರ್ನಿಯಲ್ಲಿ ಭಾಗವಹಿಸಿದ್ದ ಎಲ್ಲಾ ಆಟಗಾರರಿಗೆ ಹಾಗೂ ಸಾರ್ವಜನಿಕರಿಗೆ ರಾಯಲ್ ಚಾಲೆಂಜರ್ಸ್ ತಂಡ ಮತ್ತು ಗ್ರಾಮದ ಅಸ್ಲಾಂ ಪಾಷಾ ಅವರ ಸಹಕಾರದೊಂದಿಗೆ ಸುಚಿ-ರುಚಿಯಾದ ಊಟದ ವ್ಯವಸ್ಥೆ ಮಾಡಲಾಗಿತ್ತು. ಸುತ್ತಮುತ್ತಲಿನ ನೂರಾರು ಕ್ರೀಡಾಭಿಮಾನಿಗಳು, ಕ್ರೀಡಾ ಪ್ರೋತ್ಸಾಹಿಗಳು ಆಗಮಿಸಿ ಪಂದ್ಯಗಳನ್ನು ವೀಕ್ಷಿಸಿ ಪಂದ್ಯಾವಳಿಯ ಯಶಸ್ಸಿಗೆ ಕಾರಣರಾದರು.

ವಿಮಾನ ಪ್ರಯಾಣಿಕರ ಜೀವ ಉಳಿಸಿದ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಶ್ಲಾಘನೆ

ಸೂರ್ಯಪ್ರಗತಿನ್ಯೂಸ್.ಕಾಂ



ಗಗನದಲ್ಲಿ ಸಂಭವಿಸಿದ ದೊಡ್ಡ ವಿಮಾನ ದುರಂತವೊಂದನ್ನು ತಪ್ಪಿಸಿ ನೂರಾರು ಪ್ರಯಾಣಿಕರ ಜೀವ ಉಳಿಸಿದ ಹೆಮ್ಮೆಯ ಭಾರತೀಯ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಸಾಹಸವನ್ನು ವಿಶ್ವವೇ ಮೆಚ್ಚಿದೆ. ಈತನ ಧೈರ್ಯ ಯುವ ಜನರಿಗೆ ಪ್ರೇರಣೆಯಾಗಲಿ ಎಂದು ತಂಗನಹಳ್ಳಿ ಕಾಶಿ ಅನ್ನಪೂರ್ಣೇಶ್ವರಿ ಮಹಾಸಂಸ್ಥಾನದ ಬಸವ ಮಹಾಲಿಂಗ ಸ್ವಾಮೀಜಿ ಹೇಳಿದರು.

ನಗರದ ಬಿಜಿಎಸ್ ವೃತ್ತದ ನಾಗರಕಟ್ಟೆ ಗಣಪತಿ ದೇವಸ್ಥಾನ ನಾಗಸೇವಾ ದತ್ತಿ ಸಂಸ್ಥೆ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಾತನಾಡಿದ ಸ್ವಾಮೀಜಿ, ಸೆಪ್ಟೆಂಬರ್ 30 ರಂದು ಪ್ಲೈದುಬೈ ಸಂಸ್ಥೆಯ ವಿಮಾನವು ಆಕಾಶದಲ್ಲಿ ಹಾರಾಡುತ್ತಿದ್ದಾಗ ಸಹ ಪೈಲಟ್ ಏಕಾಏಕಿ ದಾಳಿ ನಡೆಸಿ ಸ್ಮಿತ್ ಮಚ್ಚಾರ್ ಅವರಿಗೆ ಇರಿದಿದ್ದನು. ತೀವ್ರ ರಕ್ತ ಸ್ರಾವ ಹಾಗೂ ಗಾಯಗಳಾಗಿದ್ದರೂ ಧೃತಿಗೆಡದೆ ಕ್ಯಾಪ್ಟನ್ ಸ್ಮಿತ್ ತಾವೊಬ್ಬರೇ ವಿಮಾನವನ್ನು ಸುರಕ್ಷಿತವಾಗಿ ಇಸ್ರೇಲ್‌ನಲ್ಲಿ ಲ್ಯಾಂಡಿಂಗ್ ಮಾಡುವಲ್ಲಿ ಯಶಸ್ವಿಯಾದರು ಎಂದರು.

ಇವರ ಸಮಯ ಪ್ರಜ್ಞೆ ಹಾಗೂ ಅದ್ಭುತ ಧೈರ್ಯದಿಂದಾಗಿ ವಿಮಾನದಲ್ಲಿದ್ದ 174ಕ್ಕೂ ಹೆಚ್ಚು ಪ್ರಯಾಣಿಕರು ಹಾಗೂ ಸಿಬ್ಬಂದಿಯ ಜೀವ ಉಳಿಯಿತು. ವಿಶ್ವವೇ ತಿರುಗಿ ನೋಡುವಂತಹ ಸಾಹಸ ಮಾಡಿದ ಸ್ಮಿತ್ ಅವರನ್ನು ವಿಶ್ವನಾಯಕರು ಅಭಿನಂದಿಸಿ ಅವರ ಧೈರ್ಯವನ್ನು ಕೊಂಡಾಡಿದ್ದಾರೆ. ಸ್ಮಿತ್ ಭಾರತೀಯ ಮೂಲದವರು ಎಂಬುದು ಭಾರತೀಯರು ಹೆಮ್ಮೆ ಪಡುವ ವಿಚಾರ ಎಂದು ಸ್ವಾಮೀಜಿ ಹೇಳಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಡಾ.ಧನಿಯಾ ಕುಮಾರ್ ಮಾತನಾಡಿ, ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರು ಗಗನದಲ್ಲಿ ಸಾಹಸ ಮೆರೆದು ವಿಮಾನ ಪ್ರಯಾಣಿಕರನ್ನು ಉಳಿಸಿದ್ದಾರೆ. ಇವರ ಶೌರ್ಯವನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೊಂಡಾಡಿದ್ದಾರೆ. ಅನೇಕ ಜಾಗತಿಕ ನಾಯಕರು ಅಭಿನಂದಿಸಿದ್ದಾರೆ. ಸ್ಮಿತ್ ಸಾಹಸದ ಸ್ಮರಣಾರ್ಥ ನಮ್ಮಲ್ಲಿ ಪ್ರಮುಖ ರಸ್ತೆ ಅಥವಾ ವೃತ್ತಕ್ಕೆ ಅವರ ಹೆಸರಿಟ್ಟು ಮುಂದಿನ ಪೀಳಿಗೆಗೆ ಅವರ ಸಾಹಸ ಪರಿಚಯಿಸುವ ಕೆಲಸ ಆಗಬೇಕು ಎಂದರು.

ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸಿದ್ದೇಶ್ ಅವರಿಗೆ ಈ ವೇಳೆ ನಾಗರಕಟ್ಟೆ ಗಣಪತಿ ದೇವಸ್ಥಾನ ನಾಗಸೇವಾ ದತ್ತಿ ವತಿಯಿಂದ ಸನ್ಮಾನಿಸಲಾಯಿತು. ಮುಖಂಡರಾದ ಮಂಜು ಭಾರ್ಗವ್, ಗೋಕುಲ್ ರಾಜು, ಬೆಸ್ಟೆಕ್ಸ್ ರಾಮ ರಾಜ್, ಸುಮನ್ ಮೊದಲಾದವರು ಭಾಗವಹಿಸಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.